# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 171 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 08.01.2025 • ಬುಧವಾರ • ಪುಟ:04 • ಬೆಲೆ:2

Volume:02 • Issue: 171 • PRGI No:KARKAN/2023/88055 • VIJAYANAGARA • 08.01.2025 • Wednesday • Page:04 • Rs:2



BOOK YOUR ADVERTISEMENTS TO REACH MORE READERS

1,00,000+

Digital E-PAPER READERS

M: 94486 33038

Book Advance Get More Benefits

HAMPI TIMES No.1 LEADING VIJAYANAGARA District News Paper


ಈ ಬಾರಿ ಫಲಿತಾಂಶ ನಮ್ಮದೇ

ಹಂಪಿ ಟೈಮ್ಸ್

ವಿಜಯನಗರದ ಹೆಮ್ಮೆ

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ-7

ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...

ವಿಷಯ: ಶಲಾಕಾಗ್ರದ ಮೇಲೆ ಪರಾಗದ ಮೊಳೆಯುವಿಕೆಯ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ.

ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಸಲು ಮನವಿ.

10-01-2025

ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.


ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099


ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038


# ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಲ್ಲಿ ಹೆಚ್ಚಿದ ಉತ್ಸಾಹ

### ಸರ್ಕಾರಿ ಶಾಲಾ ಮಕ್ಕಳ ಚಿತ್ರಕಲೆಗೆ ಜನರ ಮೆಚ್ಚುಗೆ | ಡಿಡಿಪಿಐ ರಾಮಚಂದ್ರಪ್ಪ ವೆಂಕಟೇಶ್ ಹರ್ಷ | 40ಕ್ಕು ಅಧಿಕ ಶಾಲೆ ಭಾಗಿ

### ಈಗಿನಿಂದ ತಯಾರಿ ವಾರ್ಷಿಕ ಪರೀಕ್ಷೆಗೆ ಸಹಕಾರಿ | ಮಕ್ಕಳ ಶೇಕಡವಾರು ಫಲಿತಾಂಶ ವೃದ್ಧಿ | ವಿಜ್ಞಾನದಲ್ಲೂ ಮೂಡಿದ ಆಸಕ್ತಿ



1



**ಗಣೇಶ್ ಕುಂಬಾರ**
ಸರ್ಕಾರಿ ಪದವಿಪೂರ್ವ ಕಾಲೇಜ್ (ಪ್ರೌಢಶಾಲಾ ವಿಭಾಗ),
ಕಮಲಾಪುರ, ಹೊಸಪೇಟೆ ತಾಲೂಕು
ಶಿಕ್ಷಕರು-ಅಸ್ಮಾ ತರನ್ನುಂ/ನೆಮ್ಯ ನಾಯ್ಕ

2



**H K ವೇದಪ್ರಿಯ**
ಸರ್ಕಾರಿ ಮುನ್ಸಿಪಲ್ ಪ್ರೌಢಶಾಲೆ
ಚಿತ್ತವಾಡಗಿ,
ಹೊಸಪೇಟೆ
ಶಿಕ್ಷಕರು - ಎ.ಎಂ. ವರಲಕ್ಷ್ಮಿ

3



**G.P ಶಿವಕುಮಾರ ಗೌಡ**
ಸರ್ಕಾರಿ ಪ್ರೌಢಶಾಲೆ,
ಹಗರಿ ಗಜಾಪುರ, ಹರಪನಹಳ್ಳಿ
ಶಿಕ್ಷಕರು-ಲಲಿತಾ ಮಾಮನಿ

(ಫಲಿತಾಂಶ 3ನೇ ಪುಟದಲ್ಲಿ)

**ಹಂಪಿ ಟೈಮ್ಸ್ ಹೊಸಪೇಟೆ:**
ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಜ.3 ರಂದು ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ? ಚಿತ್ರಸ್ಪರ್ಧೆ-6ರಲ್ಲಿ 40ಕ್ಕೂ ಅಧಿಕ ಶಾಲೆಗಳಿಂದ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ಹೊಸಪೇಟೆ ತಾಲೂಕಿನ ಕಮಲಾಪುರ ಸರ್ಕಾರಿ ಪ.ಪೂ. ಕಾಲೇಜ್ (ಪ್ರೌ.ವಿ) ವಿದ್ಯಾರ್ಥಿ ಗಣೇಶ್ ಕುಂಬಾರ (ಪ್ರಥಮ), ಹೊಸಪೇಟೆ ಚಿತ್ತವಾಡ್ಗಿ ಮುನ್ಸಿಫಲ್ ಪ್ರೌಢಶಾಲೆಯ ವಿದ್ಯಾರ್ಥಿನಿ ಎಚ್.ಕೆ.ವೇದಪ್ರಿಯ (ದ್ವಿತೀಯ) ಹಾಗೂ ಹರಪನಹಳ್ಳಿ ತಾಲೂಕಿನ ಹಗರಿ ಗಜಾಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಜಿ.ಪಿ.ಶಿವಕುಮಾರ ಗೌಡ(ತೃತೀಯ) ಸ್ಥಾನ ಪಡೆದಿದ್ದಾರೆ. ಇನ್ನುಳಿದ ವಿದ್ಯಾರ್ಥಿಗಳು ಆಯಾ ಶಾಲೆಗೆ ದಿ ಬೆಸ್ಟ್ ಚಿತ್ರವನ್ನು ಬಿಡಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ ಎಂದು ಆಯ್ಕೆ ತಂಡದ ಮುಖ್ಯಸ್ಥರಾದ ಶಿವತನಯ ಎಸ್.ಸಿ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಈ ಬಾರಿಯ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಷಯದಲ್ಲಿ ಸಮಯದ ಅಭಾವ ಎದುರಾಗಬಾರದೆಂದು ಪ್ರತಿ ಶುಕ್ರವಾರ ಪರೀಕ್ಷೆ ತಯಾರಿ ದೃಷ್ಟಿಯಿಂದ ಚಿತ್ರ ಸ್ಪರ್ಧೆ ನಡೆಸಲಾಗುತ್ತಿದ್ದು, ವಿದ್ಯಾರ್ಥಿಗಳು ಅತ್ಯುತ್ಸಾಹದಿಂದ ಚಿತ್ರಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಾರೆ. ಪ್ರತಿವಾರ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳು ಬಿಡಿಸುವ ಚಿತ್ರಕಲೆಗಳು ವಾರಕ್ಕಿಂತ ವಾರ ಉತ್ತಮಗೊಂಡಿವೆ. ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನ ಪಡೆದು ಕಡಿಮೆ ಅವಧಿಯಲ್ಲಿ ಅಚ್ಚು ಕಟ್ಟಾಗಿ ಬಿಡಿಸುವ ಕಲೆ ರೂಢಿಸಿಕೊಳ್ಳಬೇಕಿದೆ. ಪ್ರತಿವಾರ ವಿದ್ಯಾರ್ಥಿಗಳಲ್ಲಿ ಹೆಚ್ಚಿದ ಸ್ಪರ್ಧಾ ಮನೋಭಾವ ಮತ್ತು ಉತ್ಸಾಹಕ್ಕೆ ಶಿಕ್ಷಕರು ಸಂತಸ ವ್ಯಕ್ತಪಡಿಸಿದ್ದಾರೆ. ಈ ಭಾರಿ ಫಲಿತಾಂಶ ನಮ್ಮದೆ ಎಂಬ ವಿಶ್ವಾಸ ವಿದ್ಯಾರ್ಥಿಗಳಲ್ಲಿ ಬಲಗೊಂಡಿದೆ. ಮಕ್ಕಳತ್ತ ಪಾಲಕರ ಕಾಳಜಿ, ಪ್ರೋತ್ಸಾಹ ಅಗತ್ಯವಿದೆ.


ಸುದ್ದಿ, ಜಾಹೀರಾತು

ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳಿಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038

Email: hampitimes@gmail.com


## ಮೈಕ್ರೋ ನ್ಯೂಸ್

### ಹೊಲಿಗೆ ತರಬೇತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನ ಆರ್‌ಎಪಿ ಯೋಜನೆಯಡಿ ಗ್ರಾಮೀಣ ಭಾಗದ ಮಹಿಳಾ ಅಭ್ಯರ್ಥಿಗಳಿಂದ ಹೊಲಿಗೆ ತರಬೇತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

26 ಸಾಮಾನ್ಯ ವರ್ಗದ ಮತ್ತು ವಿಶೇಷ ಘಟಕ ಯೋಜನೆಯಡಿ 04 ಸೇರಿ ಒಟ್ಟು 30 ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸಿಂಡ್ ಗ್ರಾಮೀಣ ತರಬೇತಿ ಸಂಸ್ಥೆಯಿಂದ ಒಂದು ತಿಂಗಳ ಉಚಿತ ವಸತಿಯೊಂದಿಗೆ ಶಿಷ್ಯವೇತನ ರಹಿತ ತರಬೇತಿ ನೀಡಲಾಗುವುದು. ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಮಹಿಳಾ ಅಭ್ಯರ್ಥಿಗಳಿಗೆ ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ವಿತರಿಸಲಾಗುವುದು.

ಅರ್ಜಿ ಸಲ್ಲಿಸಲು ವೆಬ್‌ಸೈಟ್ ಛಿಚಿಟಟಚಿಡಿ. ಟಿಛಿ.ಎಟಿ ವಿಳಾಸಕ್ಕೆ ಭೇಟಿ ನೀಡಬೇಕು. ಅರ್ಜಿ ಸಲ್ಲಿಸಲು ಜ.22 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಬಳ್ಳಾರಿ- ಮೊ.9035547140, ಸಂಡೂರು- ಮೊ.9844200579, ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕರ ಮೊ.9901313417 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಉಚಿತ ವಿದ್ಯುತ್‌ಚಾಲಿತ ಹೊಲಿಗೆಯಂತ್ರ ವಿತರಣೆ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ವೃತ್ತಿನಿರತ ಕುಶಲ ಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಸರಬರಾಜು ಯೋಜನೆಯಡಿ ಗ್ರಾಮೀಣ ಭಾಗದ ವೃತ್ತಿನಿರತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಉಚಿತವಾಗಿ 192 ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ವಿತರಿಸಲು ಉದ್ದೇಶಿಸಲಾಗಿದ್ದು, ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

ಅರ್ಜಿಗಳನ್ನು ಆನ್‌ಲೈನ್ ವೆಬ್‌ಸೈಟ್ ಛಿಚಿಟಟಚಿಡಿ.ಟಿಛಿ.ಎಟಿ ಗೆ ಭೇಟಿ ನೀಡಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಫೆಬ್ರವರಿ 06 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಬಳ್ಳಾರಿ- ಮೊ.9035547140, ಸಂಡೂರು- ಮೊ.9844200579, ಜಿಪಂ ಗ್ರಾಮೀಣ ಕೈಗಾರಿಕೆ ಉಪನಿರ್ದೇಶಕರ ಮೊ.9901313417 ಗೆ ಸಂಪರ್ಕಿಸಬಹುದು ಎಂದು ಜಿಪಂ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆಬ್ರವರಿ 14 ರಂದು ಮೈಲಾರ ಜಾತ್ರೆ-ಕಾರ್ಣಿಕೋತ್ಸವ ಭಕ್ತಿ-ಭಕ್ತರ ಭಾವನೆಗಳಿಗೆ ಆದ್ಯತೆ: ಜಿಲ್ಲಾಧಿಕಾರಿ




**ಹಂಪಿ ಟೈಮ್ಸ್ ಹೊಸಪೇಟೆ**
ಭಕ್ತಿ ಪ್ರಧಾನವಾದ ಮೈಲಾರ ಕಾರ್ಣಿಕೋತ್ಸವದಲ್ಲಿ ಭಕ್ತರ ಭಾವನೆಗಳಿಗೆ ಧಕ್ಕೆ ಬಾರದಂತೆ ಜಾತ್ರೆ ಆಯೋಜಿಸಲು ವಿವಿಧ ಇಲಾಖೆಗಳ ಸಮನ್ವಯತೆ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ಮೈಲಾರ ಗ್ರಾಮದ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಶ್ರೀಮೈಲಾರ ಲಿಂಗೇಶ್ವರ ಜಾತ್ರೆ ಮತ್ತು ಕಾರ್ಣಿಕೋತ್ಸವದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಂಗಳವಾರ ಮಾತನಾಡಿದರು.


ಮೈಲಾರ ಜಾತ್ರೆಯು ಫೆಬ್ರವರಿ 4 ರಿಂದ ಆರಂಭವಾಗಿ 15 ವರೆಗೆ ನಡೆಯಲಿದ್ದು ಫೆಬ್ರವರಿ 14 ರಂದು ಸಂಜೆ 5.30 ಕ್ಕೆ ಡೆಂಕನ ಮರಡಿಯಲ್ಲಿ ಕಾರ್ಣಿಕೋತ್ಸವ ನಡೆಯಲಿದೆ. ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸುವ ನಿಟ್ಟಿನಲ್ಲಿ ಕುಡಿಯುವ ನೀರು ಪೂರೈಕೆ, ಸ್ವಚ್ಛತೆ, ವಿದ್ಯುತ್ ದೀಪ, ಸಾರಿಗೆ ವ್ಯವಸ್ಥೆ ಸೇರಿದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆರೋಗ್ಯ ಇಲಾಖೆಯಿಂದ ತಾತ್ಕಾಲಿಕ ಟೆಂಟ್ ವ್ಯವಸ್ಥೆಯಡಿ ಉಚಿತ ಆರೋಗ್ಯ ಸೇವೆ ಜತೆಗೆ ಅಂಬ್ಯುಲೆನ್ಸ್ ವ್ಯವಸ್ಥೆ ಕಲ್ಪಿಸುವ ಅಗತ್ಯವಿದೆ. ಅಂಬ್ಯುಲೆನ್ಸ್‌ಗಳ ಕೊರತೆ ಇದ್ದಲ್ಲಿ ವಿವಿಧ ತಾಲೂಕಿನ ಅಂಬ್ಯುಲೆನ್ಸ್‌ಗಳನ್ನು ನಿಯೋಜಿಸಿ ಸೇವೆ ನೀಡುವಂತೆ ಡಿಎಚ್‌ಒ ಶಂಕರನಾಯ್ಕರಿಗೆ ಸೂಚಿಸಲಾಯಿತು. ಖಾಸಗಿ ಸಂಸ್ಥೆಯವರು ನೀಡುವ ಬ್ಲೀಚಿಂಗ್ ಪೌಡರ್, ಪೆನಾಯಿಲ್ ಬಳಸಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು.

ಸಿಸಿ ಟಿವಿ ಅಳವಡಿಕೆ, ವಿದ್ಯುತ್ ದೀಪಗಳನ್ನು ನಿಯಮಾನುಸಾರ ವ್ಯವಸ್ಥೆ ನೀಡಬೇಕು. ಡೆಂಕನಮರಡಿ ಬಳಿ ಎಲ್ ಇಡಿ ಲೈಟ್ಸ್ ಅಳವಡಿಸಿ ಕತ್ತಲಿರದಂತೆ ನಿಗಾ ವಹಿಸಬೇಕು. ಇಡೀ ಜಾತ್ರೆಯಲ್ಲಿ ಅಧಿಕಾರಿಗಳು ವೈಯಕ್ತಿಕ ಹಿತಾಸಕ್ತಿ ಪ್ರದರ್ಶಿಸಿದರೇ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು. ಸಣ್ಣ ಅವಘಡ ನಡೆಯದಂತೆ ಇಚ್ಛಾಶಕ್ತಿ ಕರ್ತವ್ಯ ನಿರ್ವಹಿಸುವಂತೆ ಹಾಗೂ ನಾಲ್ಕು ದಿನಗಳ ಮುಂಚಿತವಾಗಿ ಮದ್ಯಮಾರಾಟ ನೀಷೇಧಿಸಲು ಸೂಚಿಸಿದರು.

ಹೂವಿನಹಡಗಲಿ ಶಾಸಕರಾದ ಕೃಷ್ಣನಾಯ್ಕ ಮಾತನಾಡಿ ಸಾರಿಗೆ ಇಲಾಖೆಯಿಂದ ಎಲ್ಲಾ ಭಾಗದ ಭಕ್ತರು ಆಗಮಿಸಲು ಹೆಚ್ಚಿನ ಬಸ್‌ಗಳನ್ನು ನಿಯೋಜಿಸಬೇಕು. ಹರಿಹರ, ದಾವಣಗೆರೆ, ಹಾವೇರಿ, ಹಡಗಲಿ, ಘಟಕಗಳಿಂದ ಬಸ್ ನೀಡಲು ವ್ಯವಸ್ಥೆ ಮಾಡಿಕೊಳ್ಳಬೇಕು. ರಾತ್ರಿ ವೇಳೆಯಲ್ಲಿ ಭಕ್ತರ ಬೇಡಿಕೆಯಂತೆ ಬಸ್ ಸಂಚಾರ ವ್ಯವಸ್ಥೆ ನೀಡಬೇಕು. ಸಮಯ ನಿಗಧಿಪಡಿಸದಂತೆ ನಿರಂತರ ಸೇವೆ ಸಾರಿಗೆ ಇಲಾಖೆ ನೀಡಲಿ. ಮೈಲಾರಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳ ದುರಸ್ತಿ ಕಾರ್ಯ ಶೀಘ್ರದಲ್ಲೇ ಆರಂಭಿಸಲಾಗುವುದು. ಜಾತ್ರೆಯ ವೇಳೆಗೆ ರಸ್ತೆ ಕಾಮಗಾರಿ ಪೂರ್ಣಗೊಳಿಸಲಾಗುವುದು. ಮೈಲಾರ ಡೆಂಕನಮರಡಿ ರಸ್ತೆ ತಾತ್ಕಾಲಿಕವಾಗಿ ಆಗಲೀಕರಣಗೊಳಿಸಿ ಭಕ್ತರಿಗೆ ಅನುಕೂಲವಾಗುವಂತೆ ವ್ಯವಸ್ಥೆ ನೀಡಲು ಸೂಚಿಸಿದರು. ಅಗ್ನಿಶಾಮಕ ದಳದಿಂದ ಕನಿಷ್ಠ ಎರಡು ವಾಹನಗಳು ತುರ್ತು ಸೇವೆ ನೀಡಲು ಸಿದ್ಧವಿರಲಿ ಎಂದು ಸೂಚಿಸಿದರು.

ಈ ವೇಳೆ ಜಿಪಂ ಸಿಇಒ ನೊಂಗ್ಜಾಯ್ ಮಹ್ಮದ ಅಲಿ, ದೇವಸ್ಥಾನದ ವಂಶ ಪಾರಂಪರ್ಯ ಧರ್ಮಕರ್ತ ಗುರುವೆಂಕಪ್ಪಯ್ಯ ಒಡೆಯರ್, ತಹಶೀಲ್ದಾರ ಸಂತೋಷ ಕುಮಾರ್, ಡಿವೈಎಸ್ಪಿ ವೆಂಕಟಪ್ಪ ನಾಯಕ, ಇಒ ಹನುಮಂತಪ್ಪ, ಸಿಪಿಐ ದೀಪಕ್ ಭೂಸರೆಡ್ಡಿ, ಗ್ರಾಪಂ ಅಧ್ಯಕ್ಷೆ ಜಾನಕಮ್ಮ ಇತರರಿದ್ದರು.

## ಆನಂದ ಬಾಣ






ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಸಂಸ್ಥಾನ ಮಹಾರಥೋತ್ಸವದ ಅಂಗವಾಗಿ ಶ್ರೀ ಗವಿಮಠದ ಆವರಣದ ಮುಂಭಾಗದಲ್ಲಿ ಸುಮಾರು 12 ಎಕರೆ ವಿಸ್ತೀರ್ಣದ ಮೈದಾನದಲ್ಲಿ 900 ರಿಂದ 1000 ಅಂಗಡಿಗಳಿಗೆ ವ್ಯವಸ್ಥೆ ಮಾಡಲಾಗಿದೆ.

# ದೌರ್ಜನ್ಯ ತಡೆ ಕಾಯ್ದೆ ಕಿರುನಾಟಕ, ಜಾಗೃತಿ ಗೀತೆ ಕಾರ್ಯಕ್ರಮಕ್ಕೆ ಚಾಲನೆ

**ಹಂಪಿ ಟೈಮ್ಸ್ ಹೊಸಪೇಟೆ**
2024-25ನೇ ಸಾಲಿನಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ನಿಮಿತ್ತ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜನಜಾಗೃತಿ ಬೀದಿ ನಾಟಕಕ್ಕೆ ಪ್ರೌಢ ಶಾಲಾ ಶಿಕ್ಷಕ ಶ್ರೀಪಾದಯ್ಯ ಚಾಲನೆ ನೀಡಿದರು.

ಹೊಸಪೇಟೆ ತಾಲೂಕಿನ ಪಾಪಿನಾಯಕನಹಳ್ಳಿ, ಹಂಪಿ, ಮಲಪನಗುಡಿ, ನಾಗೇನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ರಂಗಲೋಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಲಾತಂಡದ ಕಲಾವಿದರು ಕಿರುನಾಟಕ ಮತ್ತು ಜಾಗೃತಿ ಗೀತೆಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಈ ವೇಳೆ ಕಲಾವಿದರಾದ ಮಹಾಂತೇಶ್, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಎಂ.ಮಲ್ಲಿ ಕಾರ್ಜುನ, ಸಂಗಮೇಶ್, ಸಿ.ಮಲ್ಲಿ ಕಾರ್ಜುನ, ಕೊಟ್ರೇಶ್ ಹಕ್ಕಂಡಿ, ಹನುಮಂತಪ್ಪ ಸಂಕನೂರು ಇತರರಿದ್ದರು.



ಹಗರಿಬೊಮ್ಮನಹಳ್ಳಿಯ ಚಿಂತ್ರಪಳ್ಳಿಯಲ್ಲಿ ನಡುಗುವ ಚಳಿ ತಾಳಲಾರದೆ ಬೆಳಿಗ್ಗೆ ಉರಿ ಕಾಯಿಸಿ ಬೆಚ್ಚಗಾಗುತ್ತಿರುವ ಯುವಕರು

## ಸ್ಟುಡೆಂಟ್ ಕಾಲಂ

### ಯಾರ ಹಂಗೂ ಇಲ್ಲದ ಉದ್ಯಮ



ಒಂದು ಪಟ್ಟಣದಲ್ಲಿ ರಾಜೇಶ ಎಂಬ ಒಬ್ಬ ವ್ಯಾಪಾರಿ ಇದ್ದನು. ಅವನ ವ್ಯಾಪಾರವು ತುಂಬಾ ಚೆನ್ನಾಗಿ ನಡೆಯುತ್ತಿತ್ತು. ರಾಜೇಶನು ತನ್ನ ವ್ಯಾಪಾರದ ವೃದ್ಧಿಗಾಗಿ ಪಾಲುದಾರರ ಜೊತೆ ಕೈ ಜೋಡಿಸಿದ್ದನು. ಕೆಲವು ವರ್ಷಗಳು ವ್ಯವಹಾರ ಚೆನ್ನಾಗಿ ನಡೆಯುತ್ತಿತ್ತು. ಅವರು ವ್ಯವಹಾರದಲ್ಲಿ ಬಂದಂತಹ ಲಾಭ ನಷ್ಟವನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ಹೀಗೆ ಕೆಲವು ವರ್ಷಗಳವರೆಗೆ ನಡೆಯಿತು. ರಾಜೇಶ ಮತ್ತು ಪಾಲುದಾರರ ನಡುವೆ ಮನಸ್ತಾಪ ಉಂಟಾಯಿತು.

ಅನಂತರ ರಾಜೇಶನಿಗೆ ವ್ಯಾಪಾರವನ್ನು ಬಿಟ್ಟು ಕೃಷಿಯನ್ನು ಮಾಡಬೇಕೆಂಬ ಯೋಚನೆ ಬಂತು. ಅವನು ವ್ಯವಹಾರದಿಂದ ಬಂದ ಲಾಭವನ್ನು ಕೂಡಿ ಇಟ್ಟುಕೊಂಡಿದ್ದನು. ಅದೇ ಹಣದಿಂದ ಒಂದು ಹಳ್ಳಿಯಲ್ಲಿ ಎರಡು ಎಕರೆ ಹೊಲವನ್ನು ಖರೀದಿಸಿದನು. ಆದರೆ ಅವನಿಗೆ ಕೃಷಿ ಹೇಗೆ ಮಾಡಬೇಕೆಂಬ ಅರಿವು ಕೂಡಾ ಇರಲಿಲ್ಲ. ಹೇಗೆ ಮಾಡುವುದು ಎಂದು ಯೋಚಿಸುತ್ತಿರುವಾಗ ಅಕ್ಕ ಪಕ್ಕದ ಕೃಷಿಕರ ಸಹಾಯದಿಂದ ಕೃಷಿಯ ಬಗ್ಗೆ ತಿಳಿದುಕೊಂಡನು. ನಂತರ ಭತ್ತ, ಗೋಧಿ, ಜೋಳ ಬೆಳೆಯಲು ನಿರ್ಧರಿಸುತ್ತಾನೆ. ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಬೆಳೆಗಳಿಗೆ ಬಳಸುವುದರಿಂದ ಮಣ್ಣು ಫಲವತ್ತತ್ತೆಯನ್ನು ಕಳೆದುಕೊಳ್ಳುತ್ತದೆ ಎಂದು ತಿಳಿದುಕೊಂಡನು.



ಜಮೀನಿಗೆ ರಾಸಾಯನಿಕ ಗೊಬ್ಬರವನ್ನು ಬಳಸದೆ ಸಗಣಿ ಗೊಬ್ಬರ, ನೀರು, ಗಾಳಿ ಮತ್ತು ಮಣ್ಣಿನಂತಹ ನೈಸರ್ಗಿಕ ಸಂಪನ್ಮೂಲವನ್ನು ಬಳಸಿಕೊಂಡು ಉತ್ತಮವಾದ ಬೆಳೆಯನ್ನು ಪಡೆದನು. ಬೆಳೆದಂತಹ ಭತ್ತ, ಗೋಧಿ, ಜೋಳ, ಪಟ್ಟಣಕ್ಕೆ ತೆಗೆದುಕೊಂಡು ಸರಿಯಾದ ಬೆಲೆಗೆ ಮಾರಿದನು. ಒಂದಿಷ್ಟು ಲಾಭವು ಬಂದಿತು. ಯಾವುದೇ ಪಾಲುದಾರರ ಸಹಾಯವಿಲ್ಲದೆ ಕೃಷಿಯನ್ನು ಮಾಡಬಹುದು ಎಂಬುದನ್ನು ತಿಳಿದುಕೊಂಡನು. ಕೃಷಿಯು ಆಹಾರ ಮತ್ತು ಸರಕುಗಳನ್ನು ಉತ್ಪಾದಿಸುವ ಒಂದು ವಿಧಾನವಾಗಿದೆ ಎಂಬುದು ಅವನಿಗೆ ತಿಳಿಯಿತು. ಸಾವಿರಾರು ವರ್ಷಗಳ ಇತಿಹಾಸ ಇರುವ ಕೃಷಿಯನ್ನು ಹೊಸ ಹೊಸ ಪ್ರಯೋಗಗಳ ಮೂಲಕ ಬಳಸಿದರೆ ಉತ್ತಮ ಇಳುವರಿ ಪಡೆಯಬಹುದು ಎಂಬುದನ್ನು ರಾಜೇಶನು ತಿಳಿದುಕೊಂಡನು. ಕೃಷಿಯಿಂದ ಬಂದ ಲಾಭವನ್ನು ಕ್ರೂಢೀಕರಿಸಿ ಪ್ರತಿವರ್ಷ ಜಮೀನು ಖರೀದಿಸಿನು. ನಾಲ್ಕಾರು ವರ್ಷಗಳಲ್ಲಿ ಹತ್ತು ಎಕರೆ ಜಮೀನನ್ನು ಹೊಂದಿದನು. ಯಾರ ಹಂಗೂ ಇಲ್ಲದೇ ಯಾರ ಪಾಲುದಾರಿಕೆಯ ಉಸಾಬರಿಯೂ ಇಲ್ಲದೇ ಕೃಷಿ ಕಾಯಕವನ್ನು ಮಾಡಿಕೊಂಡು ನೆಮ್ಮದಿಯಾಗಿ ಜೀವನ ನಡೆಸಿದನು.

– ಕೀರ್ತನಾ ಹಿರೇಮಠ.

ದ್ವಿತೀಯ ಪಿಯುಸಿ. ಶ್ರೀ ಸಾಯಿ ಪದವಿ ಪೂರ್ವ ಮಹಾವಿದ್ಯಾಲಯ ಧಾರವಾಡ.




## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಕುಟುಂಬದಲ್ಲಿ ತಂದೆತಾಯಿಗಳನ್ನು ಬಿಟ್ಟರೆ ಬೇರೆ ಸದಸ್ಯರು ಇರುವುದಿಲ್ಲ, ಅಜ್ಜ–ಅಜ್ಜಿಯರಂತು ಹಳ್ಳಿಯಲ್ಲೋ, ವೃದ್ಧ ಆಶ್ರಮದಲ್ಲೋ ಇರುವುದರಿಂದ ಮಕ್ಕಳಿಗೆ ಕತೆ, ಗೀತೆ, ಸಂಸ್ಕಾರ, ಬುದ್ಧಿವಾದಗಳನ್ನು ಹೇಳುವ ತಿದ್ದಿ–ತೀಡುವವರು ಯಾರು ಇಲ್ಲದಂತಾಗಿದೆ. ತಂದೆ–ತಾಯಿಗಳು ಜೊತೆಗಿದ್ದರೂ ಇಬ್ಬರು ಕೆಲಸದಿಂದ ಬಂದು ತಮ್ಮ ಮೊಬೈಲ್‌ಗಳಲ್ಲೋ, ಕಂಪ್ಯೂಟರ್‌ಗಳಲ್ಲೋ ಜೋತಾಡಿಕೊಂಡು ಬ್ಯುಸಿಯಾಗುತ್ತಾರೆ......

# ಸಮಯವಿದೆಯೇ ಮಮ್ಮಿ ಪಪ್ಪಾ ?

ಆಧುನಿಕ ಪರಿಸರವು ನಮ್ಮ ಕುಟುಂಬಗಳನ್ನು ಅತ್ಯಂತ ಯಶಸ್ವಿಯಾಗಿ ಪ್ರವೇಶ ಮಾಡಿದೆ. ಈ ಪ್ರವೇಶಿಕೆಯು ನಮ್ಮ ಬದುಕಿನ ವಿಧಾನದಲ್ಲಿ ಬದಲಾವಣೆಯನ್ನು ತಂದಿದೆ. ಈ ರೀತಿಯ ಬದಲಾವಣೆಯನ್ನು ಬುದ್ಧಿ ಜೀವಿಗಳು ಅಭಿವೃದ್ಧಿ ಅಥವಾ ಮನುಕುಲದ ವಿಕಾಸವೆಂದು ಕರೆದು ವಿಜೃಂಭಿಸಿದ್ದಾರೆ. ಆದರೆ ದೀಪದ ಬುಡ ಕತ್ತಲೆ ಎಂಬಂತೆ ಕುಟಂಬಗಳು ಸಂಬಂಧಗಳನ್ನು ಕಳೆದುಕೊಂಡು ಸತ್ವ ಹೀನವಾಗಿ ಬೀದಿಯಲ್ಲಿ ನಿಂತಿವೆ ಎಂಬುವುದನ್ನು ನಾವು ಮರೆತ್ತಿದ್ದೇವೆ. ಮಕ್ಕಳಂತೂ ತಂದೆ–ತಾಯಿಗಳಿದ್ದು ಅನಾಥ ಪ್ರಜ್ಞೆಯನ್ನು ದತ್ತು ಪಡೆದುಕೊಂಡು ಬೆಳೆಯುತ್ತಿವೆ.

ತಂದೆ ತಾಯಿಗಳು ತಮ್ಮ ಬದುಕನ್ನು ಕಟ್ಟಿಕೊಳ್ಳುವ ಹಾಗೂ ಜಗತ್ತಿನ ಆಗು ಹೋಗುಗಳಿಗೆ ಪ್ರತಿಕ್ರಿಯಿಸುವ ಕೆಲಸವನ್ನು ತನ್ನದಾಗಿ ಸುವ ನಿಟ್ಟಿನಲ್ಲಿ ಆಧುನಿಕ ಪರಿಸರದ ಜೊತೆಗೆ ಹೆಜ್ಜೆ ಹಾಕುತ್ತಿದ್ದಾರೆ. ಇತ್ತ ತಮ್ಮ ಮಕ್ಕಳು ಸ್ಕೂಲು, ಟ್ಯೂಷನ್, ಮೊಬೈಲು, ಕಂಪ್ಯೂಟರ್ ಗಳೊಂದಿಗೆ. ಸಹಾಯಕ ಪಾಲಕರ ಜೊತೆಗೆ (ಕೆಲಸದವರ) ಸಮಯ ಕಳೆದು ದೊಡ್ಡವರಾಗುತ್ತಿದ್ದಾರೆ. ತಂದೆ ತಾಯಿಗಳ ಪ್ರೀತಿ, ಆಸರೆ, ಮಾತು, ಸಾಂತ್ವನ, ಗುಣ ನಡತೆ ಇತ್ಯಾದಿಗಳು ಮಕ್ಕಳಿಗೆ ದೂರವಾದ ಮಾತಾಗಿವೆ. ಮಕ್ಕಳು ತಂದೆ ತಾಯಿಗಳಿಂದ ಮಾತು, ಪ್ರೀತಿ, ಆಸರೆ, ಜೊತೆಗೆ ಸಮಯಗಳನ್ನು ತಮಗಾಗಿ ಬಯಸಿದರೂ ಸಿಗುವುದು ಕಷ್ಟದ ಮಾತಗಿದೆ. ಏಕೆಂದರೆ ದುಡಿಮೆ ಮತ್ತು ಕಮಿಟ್ಮೆಂಟುಗಳಲ್ಲಿ ಮಕ್ಕಳಿಗೆ ಸಮಯವನ್ನು ಕೊಡಲು ತಂದೆ–ತಾಯಿಗಳಿಗೆ ಆಗುತ್ತಿಲ್ಲ. ಸಮಯವನ್ನು ಕೊಡಬೇಕೆಂಬ ಪ್ರಜ್ಞೆಯು ಅವರಲ್ಲಿಲ್ಲ. ತಂದೆ–ತಾಯಿಗಳು ಹೆಚ್ಚಿನ ಪಾಲು ಬೌದ್ಧಿಕವಾದ ಬೆಳವಣಿಗೆಯನ್ನು ಮಕ್ಕಳಲ್ಲಿ ಹುಡುಕುತ್ತಾರೆ. ಅದಕ್ಕಾಗಿ ಉತ್ತಮ ಶಾಲೆ, ಟ್ಯೂಷನ್, ಉತ್ತಮವಾದ ಹಾಸ್ಟೆಲ್, ಕಂಪ್ಯೂಟರ್, ಬಟ್ಟೆ ಇತ್ಯಾದಿಯನ್ನು ಯೋಚಿಸುತ್ತಾರೆ ಮತ್ತು ಅವುಗಳನ್ನು ಒದಗಿಸಲು ಪ್ರಯತ್ನಿಸುತ್ತಾರೆ ಹೊರತು ಮಕ್ಕಳ ಮಾನಸಿಕ ಅಗತ್ಯತೆಗಳನ್ನು ಯೋಚಿಸುವುದಿಲ್ಲ. ತನ್ನ ಮಗುವಿಗೆ ತಾಯಿ ತಂದೆಯ ಪರಿಸರ ಎಷ್ಟು ಮುಖ್ಯವೆಂಬುದನ್ನು ಎಲ್ಲಾರು ಮರೆತ್ತಿದ್ದಾರೆ. ಈ ಮರೆಯುವಿಕೆಯ ಹಿಂದೆ ಆಧುನಿಕತೆಯ ಶ್ರಮ ಬಹು ದೊಡ್ಡದಿದೆ.

ಹಿಂದೆ ಅಂದರೆ ಏಳೆಂಟು ದಶಕದ ಮೊದಲು ಕುಟುಂಬದ ಪರಿಸರದಲ್ಲಿಯೇ ಮಕ್ಕಳು ಹೆಚ್ಚಿನ ಸಮಯ ಕಳೆಯುತ್ತಿದ್ದರು. ತಂದೆತಾಯಿಯ ಜೊತೆಗೆ ಅಜ್ಜ–ಅಜ್ಜಿ, ಚಿಕ್ಕಪ್ಪ–ಚಿಕ್ಕಮ್ಮ, ದೊಡ್ಡಪ್ಪ–ದೊಡ್ಡಮ್ಮ, ತಂಗಿ–ತಮ್ಮಂದಿರೊಂದಿಗೆ ಬೆರೆಯುತ್ತಿದ್ದರು. ಪ್ರತಿಯೊಬ್ಬ ರಿಗೂ ಮಕ್ಕಳನ್ನು ಬೆಳೆಸುವ ಆಸೆ–ಆಕಾಂಷ್ಕೆಗಳಿದ್ದವು ಮತ್ತು ಸಂಸ್ಕಾರ ನೀಡುವ ಪ್ರಜ್ಞೆಯು ಎಲ್ಲರಲ್ಲಿಯು ಇತ್ತು. ತಮ್ಮ ಭಾಷೆಯಲ್ಲಿರುವ ಪುರಾಣ, ಹಾಡು, ಕತೆ, ಒಗಟು, ಪಾರ್ದನ, ಯಕ್ಷಗಾನ ಪದ್ಯಗಳು ಹಿರಿಯರಿಂದ ಮಕ್ಕಳ ಕಿವಿಗೆ ಬೀಳುತ್ತಿತ್ತು ಜೊತೆಗೆ ಹಬ್ಬ ಹರಿದಿನಗಳು, ನೇಮ, ಕೋಲ ಇತ್ಯಾದಿ ಆಚರಣೆಗಳು ಸಂತಸ ದೊಂದಿಗೆ ಮಕ್ಕಳಿಗೆ ಆಚಾರವನ್ನು ಕಲಿಸುತ್ತಿತ್ತು. ಮಕ್ಕಳಲ್ಲಿ ಆನಾಥ ಪ್ರಜ್ಞೆ, ಏಕಾಂತಭಾವ, ಒಂಟಿತನ, ಬೊರು ಯಾವುದು ಸುಳಿಯು ತ್ತಿರಲಿಲ್ಲ. ತಂದೆ ಇಲ್ಲದ ಸಮಯದಲ್ಲಿ ತಾಯಿ, ತಾಯಿ ಇಲ್ಲದ ಸಮಯದಲ್ಲಿ ಅಜ್ಜಿನೋ ಅಜ್ಜನೋ ಚಿಕ್ಕಮ್ಮನೋ ಯಾರಾದರು ಇರುತ್ತಿದ್ದರು. ತಿಂಡಿ–ಊಟ, ಆಟ–ಪಾಟಗಳ ಜೊತೆಗೆ ಪ್ರೀತಿ, ಆಸರೆ, ಖುಷಿ ಯಾರಿಂದಲೂ ಕಡಿಮೆ ಯಾಗುತ್ತಿರಲಿಲ್ಲ. ಶಾಲೆ, ತೋಟ, ಸಮುದ್ರ, ನದಿ, ಗುಡ್ಡ ಬೆಟ್ಟಕ್ಕೆ ಸವಾರಿ ಮಾಡಲು ಅಪ್ಪನದ್ದಾಗಲಿ, ಅಜ್ಜನದ್ದಾಗಲಿ, ಚಿಕ್ಕಪ್ಪನ ದ್ದಾಗಲಿ ಹೆಗಲು ಮೀಸಲಿರುತ್ತಿತ್ತು. ಈ ಪರಿಸರದಲ್ಲಿ ಬೆಳೆಯುತ್ತಿದ್ದ ಮಕ್ಕಳಿಗೆ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯಾಗುತ್ತಿತ್ತು ಜೊತೆಗೆ ಗುರು ಹಿರಿಯರಲ್ಲಿ ಗೌರವದ ಭಾವನೆಗಳು, ಸಂಸ್ಕಾರ, ಸನ್ನಡತೆಗಳು ಅಂಟಿಕೊಳ್ಳುತ್ತಿದ್ದವು. ಹೀಗಾಗಿ ಮುಂದೆ ಮಕ್ಕಳು ಯುವಕರಾದ ಮೇಲೆ ದೇಶದ ಬಗ್ಗೆ, ಭಾಷೆಯ ಬಗ್ಗೆ, ಬದುಕಿನ ಬಗ್ಗೆ ಅಪಾರವಾದ ಜ್ಞಾನ ಪಡೆಯುತ್ತಿದ್ದರು ಮತ್ತು ಎಲ್ಲವನ್ನು ಎಲ್ಲರನ್ನು ಎದುರಿಸುವ ಶಕ್ತಿಯು ಇತ್ತು. ಹೀಗಾಗಿ ನಮ್ಮ ನೆಲದಲ್ಲಿ ವಿವೇಕಾನಂದ, ಗಾಂಧೀ, ಬಸವ, ಬುದ್ಧ, ಅಂಬೇಡ್ಕರ್‌ರಂತಹ ಮನಸ್ಸುಗಳು ಹುಟ್ಟಿಕೊಂಡದ್ದು. ಆದರೆ ಇಂದು ನೂರಿಪ್ಪತ್ತು ಕೋಟಿ ಜನರಿದ್ದು ಆಧುನಿಕತೆ ತಂದ ಎಲ್ಲಾ ಸೌಲಭ್ಯಗಳಿದ್ದರೂ ಒಬ್ಬ ಗಾಂಧೀ, ಒಬ್ಬ ವಿವೇಕಾನಂದರಂತಹ ಮನಸುಗಳನ್ನು ರೂಪಿಸ ಲಾಗುತ್ತಿಲ್ಲ.




ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper









ಇಂದು ಕುಟುಂಬದಲ್ಲಿ ತಂದೆತಾಯಿಗಳನ್ನು ಬಿಟ್ಟರೆ ಬೇರೆ ಸದಸ್ಯರು ಇರುವುದಿಲ್ಲ, ಅಜ್ಜ–ಅಜ್ಜಿರಂತು ಹಳ್ಳಿಯಲ್ಲೋ, ವೃದ್ಧ ಆಶ್ರಮದಲ್ಲೋ ಇರುವುದರಿಂದ ಮಕ್ಕಳಿಗೆ ಕತೆ, ಗೀತೆ, ಸಂಸ್ಕಾರ, ಬುದ್ಧಿವಾದಗಳನ್ನು ಹೇಳುವ ತಿದ್ದಿ–ತೀಡುವವರು ಯಾರು ಇರುವುದಿಲ್ಲ. ತಂದೆ–ತಾಯಿಗಳು ಜೊತೆಗಿದ್ದರೂ ಇಬ್ಬರು ಕೆಲಸದಿಂದ ಬಂದು ತಮ್ಮ ಮೊಬೈಲ್‌ಗಳಲ್ಲೋ, ಕಂಪ್ಯೂಟರ್‌ಗಳಲ್ಲೋ ಜೋತಾಡಿಕೊಂಡು ಬ್ಯುಸಿ ಮನುಷ್ಯರಾಗುತ್ತಾರೆ ಈ ಪರಿಸರದಲ್ಲಿ ಮಕ್ಕಳಲ್ಲಿ ಹುಟ್ಟಿಕೊಳ್ಳುವ ಒಂಟಿತನ, ಅಪರಾಧಿ ಪ್ರಜ್ಞೆ, ಅನಾಥಭಾವ ಗಳಿಂದ ಹೊರಬರಲು ಕ್ರಿಯಾಶೀಲ ದಾರಿಗಳಿರುವುದಿಲ್ಲ. ಕಾರಣ ಮಕ್ಕಳು ತಮ್ಮ ಮಾತೃಭಾಷೆಯನ್ನು ಅದರ ಸಾಂಸ್ಕೃತಿಕ ಪರಿಸರವನ್ನು ಮರೆತು ಹೊಸದಾದ ಆಧುನಿಕ ಪರಿಸರದ ಭಾಷೆಯನ್ನು, ಜೀವನ ವಿಧಾನವನ್ನು ಅಪ್ಪಿಕೊಂಡಿರುತ್ತವೆ ಇದರಿಂದ ಯಾವುದೇ ಹೊಸ ಕ್ರಿಯಾಶೀಲತೆಯು ಹುಟ್ಟಿಕೊಳ್ಳುವುದಿಲ್ಲ ಮತ್ತು ಜಗತ್ತನ್ನು ಎದುರಿಸಲು ಆಶಕ್ತರನ್ನಾಗಿ ಮಾಡಿದೆ. 'ಬರೆದಿಟ್ಟದ್ದನ್ನು ಓದಿಕೊಂಡು ಭ್ರಾಂತಿಗೆಟ್ಟವ ರಾದರು' ಎಂಬ ಮಡಿವಾಳಪ್ಪನ ಮಾತು ಈಗ ನಿಜವೆನಿಸುತ್ತದೆ. ಆಧುನಿಕ ಪರಿಸರವು ತಂದೆತಾಯಿಗಳನ್ನು ಮಕ್ಕಳಿಂದ ದೂರಮಾಡಿದೆ ಮತ್ತು ಮಕ್ಕಳಿಗೆ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ತಿಳಿಹೇಳುವ ಅನುಭವಿ ಮನಸುಗಳನ್ನು ನಗಣ್ಯಗೊಳಿಸಿದೆ. ಇದಕ್ಕೆ ಪರ್ಯಾಯವಾಗಿ ಕಂಪ್ಯೂಟರ್, ಟಿವಿ, ಮೊಬೈಲ್, ಫೆಸ್ಬುಕ್, ವಾಟ್ಸಫ್ ಇತ್ಯಾದಿ ಸಾಧನಗಳು ಮಕ್ಕಳ ಬಂಧುಗಳಾಗಿ ಸಾಮಾಜೀ ಕರಣಗೊಳಿಸುತ್ತಿವೆ. ಇದರ ಪರಿಣಾಮದಿಂದ ಮಕ್ಕಳು ಮುಂದೆ ಭವ್ಯ ಭಾರತದ ಸಧೃಡ ಪ್ರಜೆಗಳಾಗುವ ಬದಲು ಭಯೋತ್ಪಾದಕರಾ ಗುತ್ತಿದ್ದಾರೆ! ಅತೃಪ್ತ ಮನುಷ್ಯರಾಗುತ್ತಿದ್ದಾರೆ, ಬಾಂದವ್ಯ ಮತ್ತು ಸಂಬಂಧಗಳಿಗೆ ಬೆಂಕಿ ಹಾಕಿ ತಮ್ಮ ಗಂಜಿಯನ್ನು ಬೇಯಿಸಿ ಕೊಳ್ಳುತ್ತಿದ್ದಾರೆ. ಈ ನಡುವೆ ಮಕ್ಕಳನ್ನು ಕ್ರಿಯಾಶೀಲರಾಗಿ ದೇಶದ ಸಶಕ್ತ ಪ್ರಜೆಗಳಾಗಿ ರೂಪಿಸುವ ಕಾಲ ಈಗ ಸನಿಹವಾಗುತ್ತಿದೆ. ಪ್ರತಿಯೊಬ್ಬ ತಂದೆ ತಾಯಿಯನ್ನು ಒಳಗೊಂಡ ಕುಟುಂಬದವರು ತಮ್ಮ ದಿನದ ಕೆಲಸದಲ್ಲಿ ಮಕ್ಕಳಿಗೆ ಸಮಯವನ್ನು ನೀಡುವ ಮೂಲಕ ಅವರ ಮನಸನ್ನು ಕಟ್ಟಬೇಕಾಗಿದೆ. ಆಧುನಿಕ ಪರಿಸರವನ್ನು ಒಪ್ಪಿಕೊಳ್ಳವ ಜೊತೆಗೆ ನಮ್ಮ ದೇಶೀಯ ತನವನ್ನು ಬದುಕಿನ ಜೊತೆಯಲ್ಲಿ ಕೊಂಡು ಹೋಗುವುದು ನಮ್ಮೆಲ್ಲರ ಅಗತ್ಯವಾಗಿದೆ. ಪಾಲಕರಲ್ಲಿ ಕಾಡುತ್ತಿರುವ ಇಂದಿನ ದುಬಾರಿ ಶಿಕ್ಷಣ, ಹೆಚ್ಚುತ್ತಿರುವ ಆಸ್ಪತ್ರೆಗಳ ವೆಚ್ಚಗಳು ಮಕ್ಕಳೊಂದಿಗೆ ತೊಡಗಿಸಿಕೊಳ್ಳಲಾಗದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ದುಬಾರಿ ಶಿಕ್ಷಣ ಮತ್ತು ಆಸ್ಪತ್ರೆಗಳ ವೆಚ್ಚಗಳಿಗೆ ಸರ್ಕಾರಗಳು ಕಡಿವಾಣ ಹಾಕಿ, ಕೈಗೆಟುಕುವಂತೆ ಮಾಡಿದರೆ ಕುಟುಂಬಗಳಲ್ಲಿನ ಮಕ್ಕಳಿಗೆ ಕಾಡುತ್ತಿರುವ ಅನಾಥ ಪ್ರಜ್ಞೆಯನ್ನು ತೊಲಗಿಸುವುದರ ಜೊತೆಗೆ ಮನೆಯೇ ಮಂತ್ರಾಲಯ ವನ್ನಾಗಿಸಬಹುದು.

# ಮನೆಯೆಂಬ ಮೊದಲ ಪಾಠಶಾಲೆ

■ ವೀಣಾ ಹೇಮಂತಗೌಡ ಪಾಟೀಲ್, ಗದಗ



ಮಕ್ಕಳ ಮನಸ್ಸಿಗೆ ಒಳ್ಳೆಯ ವಿಚಾರಗಳನ್ನು ತುಂಬಬೇಕು, ಮಕ್ಕಳು ತೋರುವ ಉತ್ತಮ ನಡವಳಿಕೆ ಗಳನ್ನು ಪ್ರೋತ್ಸಾಹದ ನೀರು ಹಾಕಿ ಪೋಷಿಸಬೇಕು. ತಪ್ಪು ಯಾರೇ ಮಾಡಿರಲಿ ಕ್ಷಮೆ ಯಾಚಿಸುವ ಮೂಲಕ ವಿನಯ ವಂತಿಕೆಯನ್ನು ರೂಡಿಸಿಕೊಳ್ಳುವು ದನ್ನು ಮನೆ ಎಂಬ ಪಾಠಶಾಲೆಯಲ್ಲಿ ಪಾಲಕರು ಕಲಿಸಲೇಬೇಕು.

ಹಿರಿಯರಲ್ಲಿ ಗೌರವವನ್ನು ತಂದೆ–ತಾಯಿಗಳಲ್ಲಿ ಪ್ರೀತಿ ವಿಶ್ವಾಸವನ್ನು ಒಡಹುಟ್ಟಿದವರಲ್ಲಿ ಅನ್ಯೋನ್ಯತೆ ಮತ್ತು ವಾತ್ಸಲ್ಯಗಳನ್ನು ಬಂಧು ಬಾಂಧವರಲ್ಲಿ, ಸುತ್ತಣ ಸಮಾಜದ ಜನರೊಂದಿಗೆ ಒಳ್ಳೆಯ ಬಾಂಧವ್ಯವನ್ನು ಹೊಂದಿರುವುದನ್ನು ಮನೆಯೆಂಬ ಪಾಠಶಾಲೆಯಲ್ಲಿ ಮಕ್ಕಳು ಕಲಿಯಲೇಬೇಕು.

ಉತ್ತಮ ನಡೆ ನುಡಿಗಳನ್ನು, ಧಾರ್ಮಿಕ ನಂಬಿಕೆಗಳನ್ನು, ಪ್ರೀತಿ, ವಿಶ್ವಾಸ, ಕರುಣೆ, ಮಮತೆ, ಮಮಕಾರಗಳ ಅವಶ್ಯಕತೆಗಳನ್ನು ಮಕ್ಕಳಿಗೆ ಮನೆಯೆಂಬ ಪಾಠಶಾಲೆಯಲ್ಲಿ ಕಲಿಸಲೇಬೇಕು.

ತಪ್ಪು ಸರಿಗಳ ನಡುವಿನ ವ್ಯತ್ಯಾಸವನ್ನು, ಸುಳ್ಳು ಮತ್ತು ಸತ್ಯಗಳ ನಡುವಿನ ಅಂತರವನ್ನು ಒಳ್ಳೆಯ ಮತ್ತು ಕೆಟ್ಟ ವಿಷಯಗಳನ್ನು ಪರೀಕ್ಷಿಸಿ ಯಾವುದನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ಸೂಕ್ಷ್ಮವಾಗಿ ಮಕ್ಕಳಿಗೆ ಪಾಲಕರು ಮನೆ ಎಂಬ ಪಾಠಶಾಲೆಯಲ್ಲಿ ಕಲಿಸಿಕೊಡಲೇಬೇಕು.

ಬೇರೊಬ್ಬರೊಂದಿಗೆ ಗೌರವ ಪೂರ್ವಕವಾಗಿ ನಡೆದುಕೊಳ್ಳುವುದನ್ನು, ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವುದನ್ನು ಚಿಕ್ಕಂದಿನಿಂದಲೇ ಮಕ್ಕಳು ಕಲಿಯಬೇಕು.

ಸವಾಲುಗಳನ್ನು ಎದುರಿಸುವುದನ್ನು, ತಪ್ಪು ಮಾಡಿದಾಗ ಶಿಕ್ಷೆ ಖಂಡಿತ ಎಂಬ ಸತ್ಯವನ್ನು ಆತ್ಮಾಭಿಮಾನದ ಅರಿವನ್ನು ಮಕ್ಕಳು ಹೊಂದಿರಲೇಬೇಕು. ವಿಶ್ವಗುರು ಬಸವಣ್ಣನವರು ನಮಗೆ ಕೊಟ್ಟ ಸಪ್ತ ಸೂತ್ರಗಳು

"ಕಳಬೇಡ ಕೊಲಬೇಡ
ಹುಸಿಯ ನುಡಿಯಲು ಬೇಡ
ಮುನಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲಸಂಗಮ ದೇವರನೊಲಿಸುವ ಪರಿ

ಎಂಬ ಈ ವಚನದಲ್ಲಿ ಮನುಷ್ಯ ಏನನ್ನು ಮಾಡಬಾರದು ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಕಾಣಬಹುದಾಗಿದ್ದು ಈ ವಚನದ ಸಾರವನ್ನು ಮಕ್ಕಳ ಬದುಕಿನಲ್ಲಿ ಬಸಿದರೆ ಅವರ ಬಾಳು ನೈತಿಕತೆಯ ಮೌಲ್ಯಗಳ ಗೂಡಾಗುವುದರಲ್ಲಿ ಆಶ್ಚರ್ಯವಿಲ್ಲ ಅಲ್ಲವೇ?

ಸರಿಯಾದ ವಿಷಯಗಳಿಗೆ ಒತ್ತು ನೀಡುವುದು, ಪ್ರಾಪಂಚಿಕ ಬದುಕಿನಲ್ಲಿ ಒಳ್ಳೆಯ ನೆನಪುಗಳನ್ನು ಹೊಂದುವುದು, ಭಾವನೆಗಳನ್ನು, ಜೀವನದ ಸಣ್ಣ ಪುಟ್ಟ ಖುಷಿಗಳನ್ನು ಮನದುಂಬಿ ಅನುಭವಿಸುವುದನ್ನು ಮಕ್ಕಳಿಗೆ ಕಲಿಸಿಕೊಡಬೇಕು. ಉತ್ತಮ ಸಂಸ್ಕಾರಗಳನ್ನು ಮಕ್ಕಳಲ್ಲಿ ಹುಟ್ಟು ಹಾಕುವುದು, ನಮಗಿಂತ ಹಿರಿಯರನ್ನು ಗೌರವಿಸುವ ಮತ್ತು ತಮಗಿಂತ ಕಿರಿಯರನ್ನು ಪ್ರೀತಿಸುವ, ದೀನ ದಲಿತರ ವೃದ್ಧರ ಸೇವೆ ಮಾಡುವ ಅವರ ಕುರಿತು ಕರುಣೆ ಅಂತಃಕರುಣೆಗಳನ್ನು ತೋರುವುದನ್ನು ಮನೆಯ ಮೊದಲ ಪಾಠಶಾಲೆಯಲ್ಲಿ ರೂಢಿಸಬೇಕು.

ಮತ್ತೊಬ್ಬರು ತೊಂದರೆಯಲ್ಲಿ ಸಿಲುಕಿದಾಗ ಅವರಿಗೆ ಸಹಾಯ ಹಸ್ತ ಎಸಗುವುದನ್ನು, ಒಳ್ಳೆಯ ಸಂವಹನ ಕಲೆಯನ್ನು, ದೈನಂದಿನ ಬದುಕಿನಲ್ಲಿ ಉತ್ತಮ ಪ್ರಗತಿಯನ್ನು ಮಕ್ಕಳಲ್ಲಿ ರೂಡಿಸಬೇಕಾದದ್ದು ಮನೆಯ ಮೊದಲ ಪಾಠಶಾಲೆಯಲ್ಲಿ.

ಪ್ರತಿದಿನ ಮನೆಯಲ್ಲಿ ಪೂಜೆ ಪುನಸ್ಕಾರ,ಪ್ರಾರ್ಥನೆಗಳಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಮಾಡುವುದು, ಮನೆಯಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಗುಣವನ್ನು ಜೊತೆಯಾಗಿ ನಗುವ ಹರಟುವ, ಜೊತೆಯಾಗಿ ಬೆಳೆಯುವ ಕ್ಷಮಿಸುವ, ಪರಸ್ಪರ ಒಬ್ಬರಿಗೊಬ್ಬರು ಹೆಗಲೆಣೆಯಾಗುವ ಗುಣವನ್ನು ಮಕ್ಕಳಲ್ಲಿ ರೂಢಿಸುವುದು ಮನೆಯ ಮೊದಲ ಪಾಠಶಾಲೆಯಲ್ಲಿ.

'ಹುಟ್ಟು ಗುಣ ಸುಟ್ಟರೂ ಹೋಗದು' ಎಂಬ ಗಾದೆ ಮಾತಿನ ಹೇಳಿಕೆಯಂತೆ 'ಮೂರು ವರ್ಷದ ಬುದ್ಧಿ ನೂರು ವರ್ಷದವರೆಗೆ' ಎಂಬ ಹಿರಿಯರ ಅನುಭವದ ನುಡಿಗಳು ಮನುಷ್ಯನ ಬದುಕಿನಲ್ಲಿ ಬಾಲ್ಯದ ಪ್ರಭಾವವನ್ನು ನಮಗೆ ಅರ್ಥೈಸುತ್ತವೆ.ಇಂತಹ ಬಾಲ್ಯದ ಬೇರುಗಳನ್ನು ಗಟ್ಟಿಯಾಗಿ ಬೇರೂರುವಂತೆ ಮಾಡಲು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಸಮೃದ್ಧವಾಗಿಸುವ ಹೊಣೆಗಾರಿಕೆ ಪಾಲಕರ ಹೆಗಲ ಮೇಲಿದೆ.

ಅತ್ಯಂತ ಸನಾತನವಾದರೂ ನೂತನ ವಿಷಯಗಳನ್ನು ಸ್ವೀಕರಿಸುವ ನಮ್ಮ ಭಾರತೀಯ ಕೌಟುಂಬಿಕ ಪದ್ಧತಿಯನ್ನು ಉಳಿಸುವ ಬೆಳೆಸುವ ನಿಟ್ಟಿನಲ್ಲಿ ಮನೆ ಮನೆಗಳಲ್ಲಿ ಪ್ರಯತ್ನ ಸಾಗಲಿ ಎಂಬ ಆಶಯದೊಂದಿಗೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮರಿ ಹಕ್ಕಿಗಳು



ನೀಲಾಗಸದ ಬಿಳಿ ಮೋಡಗಳ ಹೊಳಪಲಿ
ಸಂತಸದಿ ಹಾರುತ ಖಗಗಳು
ಬಾನಂಗಳದಲಿ
ಹುಲ್ಲಲಿ ಹಣೆದ ಪುಟ್ಟ ಗೂಡಿನಲಿ
ಮರಿಗಳಿದ್ದವು ಹಸಿರ ಎಲೆಗಳ ನಡುವಿನಲಿ

ಕೇಳಿತು ಮರಿಗಳ ಚಿಲಿಪಿಲಿ ಕಲರವ
ಕಂಡಿತು ಪುಟ್ಟ ಹಕ್ಕಿಗಳ ತುಂಟಾಟವ
ಕಣ್ಣ ಮಿಟುಕಿಸುತ ನೋಡುತಿಹು ಜಗವ
ಹೇಳ ತೀರದು ಅವುಗಳ ಸಂಭ್ರಮವ

ಹಕ್ಕಿಗಳೆರಡು ಪೋಷಿಸುತ ಮರಿಗಳ
ಚಂದದಿ
ಕಾವನು ನೀಡುತ ರಕ್ಷಿಸಿದವು ಜತನದಿ
ಗುಟುಕ ಕೊಟ್ಟು ಬೆಳೆಸಿದವು ಮುದದಿ
ಸ್ವತಂತ್ರವಾಗಿ ಹಾರಲು ಕಲಿತವು ಆಗಸದಿ

– ಚೇತನ ಭಾರ್ಗವ, ಬೆಂಗಳೂರು

### ಪರಿಮಳ

ಅಪರೂಪಕ್ಕೊಮ್ಮೆ ಅವನು ಮಾಡಿದ
ಅಡುಗೆ
ಪರಿಮಳ ಹರಡಿತು ಹೊರಗಡೆವರೆಗೆ
ಕೈ ರುಚಿ ಹಿಡಿಸಿತು ಮನೆಯವರಿಗೆ
ಅವನಿಗೊಂದು ಕೆಲಸ ಸೇರ್ಪಡೆ ಆಯಿತು
ಕೊನೆಯವರೆಗೆ.

– ಸುವರ್ಣಾ ಭಟ್ಟ.

## ಎಸ್‌ಎಸ್‌ಎಲ್‌ಸಿ ವಿಜ್ಞಾನ ಸ್ಪರ್ಧೆ-6ರ ಫಲಿತಾಂಶ

# ಶಾಲೆಯಲ್ಲಿ ದಿ ಬೆಸ್ಟ್‌ಚಿತ್ರ ಬಿಡಿಸಿದ ವಿದ್ಯಾರ್ಥಿಗಳು

**ಹೊಸಪೇಟೆ ತಾಲ್ಲೂಕು**

**1. G.V ಮಾನಸ**
ಸರ್ಕಾರಿ ಪ್ರೌಢಶಾಲೆ ಕಾಕುಬಾಳು
ಶಿಕ್ಷಕರು– ಶಶಿಧರ P M

**2.M P ರಘುನಂದನ**
PVSBC ಪ್ರೌಢಶಾಲೆ, ಹೊಸಪೇಟೆ
ಶಿಕ್ಷಕರು–ಜಯಪ್ರಭು

**3. ಪ್ರಿಯಾಂಕ**
ಸರಕಾರಿ ಬಾಲಕಿಯರ ಪ್ರೌಢಶಾಲೆ
(ಮಾ.ಪು) ಹೊಸಪೇಟೆ
ಶಿಕ್ಷಕರು – ಉ ರವೀಂದ್ರ

**4. ಅಶ್ವಿನಿ**
ಸರ್ಕಾರಿ ಬಾಲಕಿಯರ ಪ್ರೌಢಶಾಲೆ,
ಕಮಲಾಪುರ , ಶಿಕ್ಷಕರು–

**5. ಸಿಂಚನ**
ಶ್ರೀ ಸೇಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆ
ಮರಿಯಮ್ಮನಹಳ್ಳಿ
ಶಿಕ್ಷಕರು– ಸರಸ್ವತಿ

**6. ಅಂಕಿತ**
ಸ್ಮಯೋರ್ ವ್ಯಾಸಪುರಿ ಆಂಗ್ಲ ಮಾಧ್ಯಮ
ಪ್ರೌಢಶಾಲೆ, ವ್ಯಾಸನಕೆರೆ
ಶಿಕ್ಷಕರು–ವಾಣಿ/ನಂದ ಕುಮಾರ್

**7. H K ವೇದಪ್ರಿಯ**
ಮುನ್ಸಿಪಲ್ ಪ್ರೌಢಶಾಲೆ
ಚಿತ್ತವಾಡಗಿ, ಹೊಸಪೇಟೆ
ಶಿಕ್ಷಕರು– ಎ ಎಂ ವರಲಕ್ಷ್ಮಿ

**8. N V ಅನಿತಾ**
ಸರ್ಕಾರಿ ಪ್ರೌಢಶಾಲೆ ಕಾರಿಗನೂರು
ಶಿಕ್ಷಕರು–ನಾಗವೇಣಿ ಆ

**9. H ಪ್ರಿನ್ಸಿ**
ಸರ್ಕಾರಿ ಪ್ರೌಢಶಾಲೆ ಅನಂತಶಯನ ಗುಡಿ
ಶಿಕ್ಷಕರು–ಗಂಗಮ್ಮ

**10. S N ಸುಮಾ**
ಸರ್ಕಾರಿ ಸಂಯುಕ್ತ ಬಾಲಕಿಯರ ಪದವಿ
ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ
ಶಿಕ್ಷಕರು–ಶಿವಮ್ಮ

**11. M ಚೈತ್ರ**
ಬಿ ಆರ್ ಆರ್ ಜಿ ಪ್ರೌಢಶಾಲೆ
ಜಿ ನಾಗಲಾಪುರ
ಶಿಕ್ಷಕರು–ಚನ್ನಬಸಪ್ಪ

**12. ಸಹನ H**
ಸರ್ಕಾರಿ ಪ್ರೌಢಶಾಲೆ
ಡಣಾಪುರ
ಶಿಕ್ಷಕರು–ಸಂಧ್ಯಾ, ಸೌಜನ್ಯ

**13. ನಿಹಾರಿಕಾ K**
ಮಹಿಳಾ ಸಮಾಜ ಆಂಗ್ಲ ಮಾಧ್ಯಮ
ಪ್ರೌಢಶಾಲೆ, ಹೊಸಪೇಟೆ
ಶಿಕ್ಷಕರು–ಕವಿತಾ A M/ಸುರೇಶ್
ಬಾಬು

**14. ಉಷಾ**
ಸರ್ಕಾರಿ ಪ್ರೌಢಶಾಲೆ
ಮಲಪನ ಗುಡಿ
ಶಿಕ್ಷಕರು–ಅನಿತಾ A V

**15. ಗಣೇಶ್ ಕುಂಬಾರ**
ಸರ್ಕಾರಿ ಪದವಿಪೂರ್ವ
ಕಾಲೇಜ್ (ಪ್ರೌಢಶಾಲಾ
ವಿಭಾಗ), ಕಮಲಾಪುರ
ಶಿಕ್ಷಕರು–ಅಸ್ಮಾ
ತರನ್ನುಂ/ನೆಮ್ಮ ನಾಯ್ಕ

**16. ಮಮತಾ**
ಸರ್ಕಾರಿ ಪ್ರೌಢಶಾಲೆ, ಬುಕ್ಕ
ಸಾಗರ
ಶಿಕ್ಷಕರು – B ಮೊಹಮ್ಮದ್ ಮನ್ಸೂರ್
ಅಲಿ

**17.H ಸವಿತಾ**
K.G.B.V ಶಾಲೆ ಕಮಲಾಪುರ
ಶಿಕ್ಷಕರು–ಗಾಯಿತ್ರಿ ಖಿ

**18.K ತೇಜಸ್ವಿನಿ**
ರಾಣಿ ಚೆನ್ನಮ್ಮ ಪ್ರೌಢಶಾಲೆ, ಹೊಸಪೇಟೆ
ಶಿಕ್ಷಕರು– ಸಿಂಧುಜಾ

**19. ಓ ಕೀರ್ತಿ**
ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ
ಮರಿಯಮ್ಮನಹಳ್ಳಿ
ಶಿಕ್ಷಕರು–ಜಾಕೀರ್ ಹುಸೇನ್

**20. ಪ್ರಶಾಂತ ಕುಮಾರ**
ಸರ್ಕಾರಿ ಪ್ರೌಢಶಾಲೆ, ಗುಂಡ
ಶಿಕ್ಷಕರು–ನಾರಾಯಣ ಕೆ

**ಹಗರಿಬೊಮ್ಮನಹಳ್ಳಿ ತಾಲೂಕು**

**1. H S ಅರುಣ ಕುಮಾರ**
S.G.B. ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ S C

**2. ನಿರೀಕ್ಷಾ K**
ಕೌ ದಿ ಮಹಂತೇಶ್ವರ



ಪ್ರೌಢಶಾಲೆ, ಬಾಚಿಗೊಂಡನಹಳ್ಳಿ
ಶಿಕ್ಷಕರು– ಪ್ರಕಾಶಪ್ಪ V

**3. ದರ್ಶನ L**
ಸರ್ಕಾರಿ ಪ್ರೌಢಶಾಲೆ, ಉಪನಾಯಕನಹಳ್ಳಿ
ಶಿಕ್ಷಕರು–ಕವಿತಾ

**4. H ಮಾನಸ**
K.P.G ಪ್ರೌಢಶಾಲೆ, ತಂಬ್ರಹಳ್ಳಿ
ಶಿಕ್ಷಕರು – ಎ ರಾಜೇಶ್ವರಿ

**5. B ಕಾವ್ಯ**
P.K.M ಪ್ರೌಢಶಾಲೆ, ದಶಮಾಪುರ
ಶಿಕ್ಷಕರು–ಅನಿತಾ

**6. S ಅನುಶ್ರೀ**
ಕೆ. ಪಿ. ಸರ್ಕಾರಿ ಪ್ರೌಢಶಾಲೆ, ಹಳೆ
ಹಗರಿಬೊಮ್ಮನಹಳ್ಳಿ
ಶಿಕ್ಷಕರು–ಮುದ್ದಮ್ಮ

**7. ಏ ನಂದಿತಾ**
ಸರ್ಕಾರಿ ಪ್ರೌಢಶಾಲೆ ವರದಾಪುರ
ಶಿಕ್ಷಕರು–ಮಂಜುಳಾ

**8. ಕೆ.ಸಂಜನ**
ಸರ್ಕಾರಿ ಪ್ರೌಢಶಾಲೆ, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್

**9. ಕೆ. ಸಂಗೀತ**
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ,
ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ

**10. ಸುಧಾ ಬಿ**
ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್

**11. ಪಿ. ಚಂದನ**
ರಾಷ್ಟ್ರೋತ್ಥಾನ ಪ್ರೌಢಶಾಲೆ,
ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್

**12. ಪಿ. ಸಹನ**
ಎಲ್.ಎಚ್.ಎಸ್ ಪ್ರೌಢಶಾಲೆ,
ಹಂಪಸಾಗರ
ಶಿಕ್ಷಕರು–ವಿಜಯಕುಮಾರ ಬೇಂದ್ರೆ

**ಹಡಗಲಿ ತಾಲೂಕು**

**1. ದೇವರಾಜ ನಾಯ್ಕ S**
P.K.K.K.P.S ಪ್ರೌಢಶಾಲೆ,
ಹಿರೇಹಡಗಲಿ
ಶಿಕ್ಷಕರು–ಪಾಂಡು ನಾಯ್ಕ D/ಕವಿತಾ

**2. K. ನಿಖಿಲ್**
ಶ್ರೀ ಶರಣಬಸವೇಶ್ವರ ಸರ್ಕಾರಿ
ಪ್ರೌಢಶಾಲೆ, ಮೀರಾ ಕೊರನಹಳ್ಳಿ
ಶಿಕ್ಷಕರು–ಗುರುಪ್ರಸಾದ್ ಏ.ಓ

**3. ವೀರೇಶ ಕೋರಿ**
ಸರ್ಕಾರಿ ಪ್ರೌಢಶಾಲೆ, ಹರವಿ
ಶಿಕ್ಷಕರು–

**ಕೊಟ್ಟೂರು ತಾಲೂಕು**

**1. ವೇದಶ್ರೀ**
M.D.R.S ಅಂಬಳಿ
ಶಿಕ್ಷಕರು–ಕೊಟ್ರೇಶ ನಾಯ್ಕ

**ಕೂಡ್ಲಿಗಿ ತಾಲೂಕು**

**1. ಯಶವಂತ H**
ಶರಣಬಸವೇಶ್ವರ ಸಮನ್ವಯ ಪ್ರೌಢಶಾಲೆ,
ಕಾನಾಮಡುಗು
ಶಿಕ್ಷಕರು–ತಿಪ್ಪೇಶ್ B.N

**ಸಂಡೂರು ತಾಲೂಕು**

1. B ಲಕ್ಷ್ಮಿ
ಉಜ್ಜಿನಿ ಜಗದ್ಗುರು ಸಿದ್ದೇಶ್ವರ ಪ್ರೌಢಶಾಲೆ
ಯಶವಂತ ನಗರ
ಶಿಕ್ಷಕರು–ಸುಧಾ ಖಿ.ಒ

**ಹರಪನಹಳ್ಳಿ ತಾಲೂಕು**

**1. G.P ಶಿವಕುಮಾರ ಗೌಡ**
ಸರ್ಕಾರಿ ಪ್ರೌಢಶಾಲೆ, ಹಗರಿ ಗಜಾಪುರ
ಶಿಕ್ಷಕರು–ಲಲಿತಾ ಮಾಮನಿ

**ಬಳ್ಳಾರಿ ಜಿಲ್ಲೆ**

**1. ಇಂದು**
ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ
ಅನುದಾನಿತ ಪ್ರೌಢಶಾಲೆ,
ಬಳ್ಳಾರಿ
ಶಿಕ್ಷಕರು– H ಶೈಲಜ

**ಗದಗ ಜಿಲ್ಲೆ**

**1. ಅಶ್ವಿನಿ ಜವಳಿ**
ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಹಸೂಟಿ
ರೋಣ ತಾ. ಗದಗ ಜಿ.
ಶಿಕ್ಷಕರು– M.V ಪ್ರಕಾಶಾರಾಧ್ಯ

**ಶಿವಮೊಗ್ಗ ಜಿ.**

**1. ಅಕ್ಷಯಕುಮಾರ**
ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆ,
ಆಗರದ ಹಳ್ಳಿ
ಭದ್ರಾವತಿ ತಾ. ಶಿವಮೊಗ್ಗ ಜಿ.
ಶಿಕ್ಷಕರು– ಎಂ.ಜಿ ಮಂಜುನಾಥ

# ಮಹಾ ಯುದ್ಧಗಳು ಜರುಗಲಿವೆ ದೇಶಕ್ಕೆ ಕೇಡಿಲ್ಲ
# ನಾಡಿನ ಶ್ರೇಷ್ಠ ಉದ್ಯಮವಾಗಲಿದೆ ಕೃಷಿ

## ಕಾಲಜ್ಞಾನಿ ಡಾ.ಶರಣಬಸವ ಶ್ರೀಗಳಿಂದ ಭವಿಷ್ಯ | ಆಧ್ಯಾತ್ಮ ಚಿಂತನೆ ಇರಲಿ



■ **ಹಂಪಿ ಟೈಮ್ಸ್ ಕೂಡ್ಲಿಗಿ**
ಮುಂದಿನ ದಿನಮಾನಗಳಲ್ಲಿ, ನಮ್ಮ ಹೆಮ್ಮೆಯ ಭಾರತ ಸರ್ವತೋಮುಖ ಅಭಿವೃದ್ಧಿ ಹೊಂದಲಿದೆ. ವಿಶ್ವದಲ್ಲಿಯೇ ಅಗ್ರಸ್ಥಾನ ಹೊಂದಲಿದೆ ಎಂದು ಕಾಲಜ್ಞಾನಿ ಡಾ" ಶರಣ ಬಸವ ಸ್ವಾಮೀಜಿಗಳು ಭವಿಷ್ಯ ನುಡಿದರು.

ತಾಲೂಕಿನ ಮೊರಬ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರೆ ಪ್ರಯುಕ್ತ, ಹೆಗ್ಡಾಳು ಬಣಕಾರ ಮೂಗಪ್ಪರವರ ನೇತೃತ್ವದಲ್ಲಿ, ಕಲಾ ಭಾರತಿ ಕಲಾ ಸಂಘ ಅಯೋಜಿಸಲಾಗಿದ್ದ ರಕ್ತರಾತ್ರಿ ನಾಟಕ ಪ್ರದರ್ಶನದ ಕಾರ್ಯಕ್ರಮದಲ್ಲಿ. ದಿವ್ಯ ಸಾನಿಧ್ಯ ವಹಿಸಿ ಭಾನುವಾರ ಆಶೀರ್ವಚನ ನೀಡಿ ಮಾತನಾಡಿದರು. ಊರೂರಿಗೆ ಬೇಲಿ ಹಾಕೋ ಕಾಲ ಹತ್ತಿರ ಬಂದಿದೆ, ವಿಶ್ವ ಬೆಚ್ಚಿ ಬೀಳೋ ಕಾಯಿಲೆಗಳು ಹುಟ್ಟಿಕೊಳ್ಳುತ್ತವೆ. ಮಹಾ ಯುದ್ಧಗಳು ಜರುಗಲಿವೆ, ಆದ್ರೆ ಅದರಿಂದ ದೇಶಕ್ಕೆ ಕೇಡಿಲ್ಲ. ಯುದ್ಧ ತಡೆಯುವ ಪ್ರಯತ್ನದ ಮದ್ಯಸ್ಥಿಕೆ ವಹಿಸುವ, ಮಹತ್ವದ ಸ್ಥಾನ ಭಾರತ ದೇಶ ಹೊಂದಲಿದೆ. ಭಾರತ ವಿಶ್ವದಲ್ಲಿಯೇ ಸರ್ವತೋಮುಖ ಅಭಿವೃದ್ಧಿ ಹೊಂದಲಿದ್ದು, ವಿಶ್ವದ ಅತ್ಯಂತ ಶ್ರೀಮಂತ ರಾಷ್ಟ್ರವಾಗಿ ಹೊರ ಹೊಮ್ಮಲಿದೆ ಎಂದರು.

ವಿಶ್ವ ಸಂಸ್ಥೆಯ ಅಧ್ಯಕ್ಷೀಯ ಪಟ್ಟವನ್ನು, ಭಾರತ ಹೊಂದುವ ಸಾಧ್ಯತೆ ಇದೆ. ಅನ್ಯ ರಾಷ್ಟಗಳಿಂದ ಯಾವುದೇ ತೊಂದರೆ ಇಲ್ಲ, ಹೊರದೇಶ ರಾಜ್ಯಗಳಿಂದ ಗಂಭೀರ ಖಾಯಿಲೆಗಳು ನುಸುಳುವ ಸಾಧ್ಯತೆ ಹೆಚ್ಚಿದೆ. ಮುಂಜಾಗ್ರತಾ ಕ್ರಮಗಳ ಅನಿವಾರ್ಯತೆ, ನಾಡನ್ನಾಳುವವರಿಗೆ ದೂರಾಲೋಚನೆ ಮುಖ್ಯ. ಊರು ಊರುಗಳು ಬೇಲಿ ಹಾಕಿಕೊಂಡು, ಪರಸ್ಪರ ದಿಗ್ಭಂಧನ ಹೇರೋ ಕಾಲ ಹತ್ತಿರದಲ್ಲಿದೆ. ಕಾಯಿಲೆ ಕಸಾಲೆಗಳಿಂದ ದೂರವಾಗಲು ಮೊದಲು, ಆಗತ್ಯ ಮುಂಜಾಗ್ರತ ಕ್ರಮಗಳನ್ನು ಪಾಲಿಸಬೇಕು. ಆತ್ಮ ವಿಶ್ವಾಸ ಹೆಚ್ಚಿಸಿಕೊಳ್ಳಲು ನೆಮ್ಮದಿಯ ಬದುಕಿಗೆ, ಧ್ಯಾನ ಪ್ರಾರ್ಥನೆಗಳೊಂದಿಗೆ ದೇವರ ಮೊರೆ ಹೋಗಬೇಕು. ನೆಮ್ಮದಿ ಹೊಂದಬೇಕಂದರೆ ಮನೋ ವ್ಯಾದಿಗಳಿಂದ ಮುಕ್ತಿ ಬೇಕು. ಅದಕ್ಕೆ ಆಧ್ಯಾತ್ಮವೇ ದಿವ್ಯ ಔಷಧವಾಗಲಿದೆ. ಮೊರಬ ಗ್ರಾಮ ಸೇರಿದಂತೆ ತಾಲೂಕು ನೆರೆ ಹೊರೆ ತಾಲೂಕುಗಳಲ್ಲಿ, ರೈತರು ಬೆಳೆದ ಬೆಳೆಗೆ ಉತ್ತಮ ಲಾಭ ದೊರಕಲಿದೆ. ರೈತರು ತಮ್ಮ ಕಸುಬನ್ನು ಬಿಡಬಾರದು, ಮುಂದಿನ ದಿನಮಾನಗಳಲ್ಲಿ ರೈತರೇ ನಾಡಿನ ಶ್ರೀಮಂತ ವರ್ಗವಾಗಲಿದೆ. ಪ್ರಪಂಚದ ಯಾವುದೇ ಉದ್ಯಮಕ್ಕಿಂತ ಹಾಗೂ ನೌಕರಿಗಿಂತ, ನಾಡಿನ ರೈತರು ಎಲ್ಲದಕ್ಕೂ ಮುಂದುವರೆಯಲಿದ್ದಾರೆ. ಕೃಷಿ ವಿಶ್ವದ ಅತ್ಯಂತ ಲಾಭದಾಯಕ ಉದ್ಯಮವಾಗಿ, ಹಾಗೂ ಸ್ವಾವಲಂಬಿ ಉದ್ಯಮವಾಗಿ ಅಭಿವೃದ್ಧಿ ಹೊಂದಲಿದೆ. ಭೂಮಿಯನ್ನು ನಂಬಿರುವ ಸ್ವಾಲಂಬಿಗಳಾದ ಅನ್ನದಾತನೇ, ನಾಡಿನ ಅತ್ಯಂತ ಶ್ರೇಷ್ಠ ಶ್ರೀಮಂತನಾಗುವನು. ಐಟಿ ಬಿಟಿ ತಂತ್ರಜ್ಞಾನ ವ್ಯಾಪಾರ ನೌಕರಿ ಅಧಿಕಾರದ ಹುದ್ದೆಗಳಿಗಿಂತ, ಎಲ್ಲಾ ಕ್ಷೇತ್ರಗಳಿಗಿಂತ ಕೃಷಿ ಕ್ಷೇತ್ರದವರೇ ಅತ್ಯಂತ ಶ್ರೇಷ್ಠ ಸ್ಥಾನ ಹೊಂದಲಿದ್ದಾರೆ. ಉತ್ತಮ ಭವಿಷ್ಯವಿದೆ ಎಂದರು. ರೈತರು ಬೆಳೆದ ಎಲ್ಲಾ ಕಾಳು ಕಡಿಗೆ ದವಸ ಧಾನ್ಯಗಳಿಗೆ, ಯೋಗ್ಯ ಬೆಲೆ ಸಿಗಲಿದೆ ಕೈ ಕೆಸರಾದರೆ ಬಾಯಿ ಮೊಸರು ಮಾತು ನೂರಕ್ಕೆ ನೂರರಷ್ಟು ಸತ್ಯವಾಗಲಿದೆ ಎಂದರು. ಐಗಳ ಮಲ್ಲಾಪುರ ಗರುಡದ್ರಿ ಮಠದ ಶ್ರೀ ಮಾರುತಿ ಸ್ವಾಮೀಜಿಗಳು ಉದ್ಘಾಟಿಸಿದರು. ಹಿರೇ ಹೆಗ್ಡಾಳು ಕಲಾಭಾರತಿ ಕಲಾ ಸಂಘದ ಅಧ್ಯಕ್ಷ, ಹಾಗೂ ಸಂಸ್ಥಾಪಕರಾದ ಬಣಕಾರ್ ಮೂಗಪ್ಪರವರ ನೇತೃತ್ವದಲ್ಲಿ. ನುರಿತ ಹಿರಿಯ ಕಲಾವಿದರಿಂದ ರಕ್ತ ರಾತ್ರಿ ನಾಟಕ ಪ್ರದರ್ಶನವಾಯಿತು, ಮನೋಜ್ಞವಾದ ರೌದ್ರಮಯ ಅಭಿನಯ. ನೆರೆದ ಸಹಸ್ರಾರು ಕಲಾ ರಸಿಕರನ್ನು ಮನಸೂರೆಗೊಳಿಸುವಲ್ಲಿ ಯಶಸ್ವಿಯಾಯಿತು. ಕಲಾಭಾರತಿ ಕಲಾ ಸಂಘದ ಪದಾಧಿಕಾರಿಗಳು ಸರ್ವ ಸದಸ್ಯರು. ಗ್ರಾಮ ಪಂಚಾಯ್ತಿ ಅಧ್ಯಕ್ಷರು ಉಪಾಧ್ಯಕ್ಷರು, ಹಾಗೂ ಸರ್ವ ಸದಸ್ಯರು. ವಿಎಸ್ಸೆಸ್ಎನ್ ಮಾಜಿ ಅಧ್ಯಕ್ಷರು, ನಿರ್ದೇಶಕರು. ತಾಲೂಕ ಪಂಚಾಯ್ತಿ ವಿವಿದ ಗ್ರಾಮ ಪಂಚಾಯ್ತಿಗಳ ಸದಸ್ಯರು, ಹಾಗೂ ವಿವಿದ ಜನಪ್ರತಿನಿಧಿಗಳು ಗ್ರಾಮದ ಹಿರಿಯರು ಮುಖಂಡರು ಉಪಸ್ಥಿತರಿದ್ದರು.

# ಬೆಂಬಲ ಬೆಲೆ ಯೋಜನೆ: ತೊಗರಿ ಖರೀದಿ ಕೇಂದ್ರಗಳ ಪ್ರಾರಂಭ

■ **ಹಂಪಿ ಟೈಮ್ಸ್ ಕೊಪ್ಪಳ**
ಕೊಪ್ಪಳ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ತೊಗರಿ ಉತ್ಪನ್ನ ಖರೀದಿಸುವ ಸಂಬಂಧ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೊಗರಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಎಂದು ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕರು ಹಾಗೂ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಪ್ರತಿ ಕ್ವಿಂಟಾಲ್‌ಗೆ ರೂ. 7550 ಗಳಂತೆ ಎಕರೆಗೆ 4 ಕ್ವಿಂಟಾಲ್‌ನಂತೆ ಒಬ್ಬ ರೈತರಿಂದ ಗರಿಷ್ಠ 40 ಕ್ವಿಂಟಲ್‌ರಂತೆ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಕೊಪ್ಪಳ ಜಿಲ್ಲೆಯ ರೈತರಿಂದ ಖರೀದಿಸುವ ಕುರಿತು ಇತ್ತೀಚೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಸಭೆ ಜರುಗಿಸಿ, ಕೊಪ್ಪಳ ತಾಲ್ಲೂಕಿನ ಹಿರೇಸಿಂಧೋಗಿ, ಕನಕಗಿರಿ >>4

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

**ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು**

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ³

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

**ರಸಪ್ರಶ್ನೆ – 2 ಉತ್ತರಗಳು**

(1) 2d (2) Y= 1, x=2 (3) $\frac{5}{36}$ (4) x =7 , -5
(5) $\frac{3}{2}$, 1 (6) 10 (7) $x = a + \frac{\Sigma fidi}{\Sigma fi}$ (8) 4¶$r^2$
(9) $k = \pm 2\sqrt{6}$ (10) $0^0$ (11) 4 ಸೆಂ.ಮೀ
(12) 40cm (13) X = 4 & y = -1 (14) 625
(15) 2x + 5y = 1000 (16) 3 : 1
(17) $a_n = 3n + 2$ (18) 10

---


**2024–25 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳು**

1) $5^2 \times 2$ ಮತ್ತು $2^5 \times 5$ ರ ಮ.ಸಾ.ಅ ಏನು?
(A) 2x5 (B) $2^5$x5 (C) $5^2$x$2^6$ (D) $2^5$x$5^2$

2) ಮೊದಲ n ಸ್ವಾಭಾವಿಕ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ?
(A) $n(n+1)$ (B) $\frac{n(n+2)}{2}$
(C) $\frac{n(n+1)}{2}$ (D) $n(n-1)$

3) $a_1x+b_1y+c_1 = 0$ ಮತ್ತು $a_2x+b_2y+c_2 = 0$ ಈ ಜೋಡಿ ರೇಖಾತ್ಮಕ ಸಮೀಕರಣಗಳಲ್ಲಿ ಕೆಳಗಿನ ಯಾವ ಸಂದರ್ಭವು ಉಂಟಾಗುವುದಿಲ್ಲ?
(A) $\frac{a_1}{a_2} \neq \frac{b_1}{b_2}$ (B) $\frac{a_1}{a_2} = \frac{b_1}{b_2} \neq \frac{c_1}{c_2}$
(C) $\frac{a_1}{a_2} = \frac{b_1}{b_2} = \frac{c_1}{c_2}$ (D) $a_1 = a_2$, $b_1=b_2$, $c_1=c_2$


4) ನಕ್ಷೆಯಲ್ಲಿ ಕೊಟ್ಟಿರುವ y =p(x) ಬಹುಪದೋಕ್ತಿಯು ಹೊಂದಿರುವ ಶೂನ್ಯತೆಗಳು




(A) 2 (B) 3 (C) 4 (D) 5

5) X(X+2)=6 ಇದು ಒಂದು
(A) ರೇಖಾತ್ಮಕ ಸಮೀಕರಣ (B) ವರ್ಗಸಮೀಕರಣ
(C) ಘನ ಬಹುಪದೋಕ್ತಿ (D) ವರ್ಗಬಹುಪದೋಕ್ತಿ

6) ಚಿತ್ರದಲ್ಲಿ A PQR ~ A ABC ಆಗಿದೆ. ಇವುಗಳಲ್ಲಿ, ತ್ರಿಭುಜಗಳ ಅನುರೂಪ ಬಾಹುಗಳ ಜೋಡಿಯು




A) PQ ಮತ್ತು AB (B) PR ಮತ್ತು AB
(C) QR ಮತ್ತು AC (D) PR ಮತ್ತು BC

7) sin2A-cos2 A ಇದಕ್ಕೆ ಸಮವಾಗಿದೆ
(A) 1 (B) 1-2cos2 A (C) 1+2cos2 A (D) -1

8. ಒಂದು ಯಾದೃಚ್ಛಿಕ ಪ್ರಯೋಗದ ಎಲ್ಲಾ ಪ್ರಾಥಮಿಕ ಘಟನೆಗಳ ಸಂಭವನೀಯತೆಯ ಮೊತ್ತವು
(A) 0 (B) $\frac{1}{2}$ (C) 1 (D) -1

9) 2x + by = 8 ಮತ್ತು 2 (2x + 3y) = 16 ಈ ರೇಖಾತ್ಮಕ ಸಮೀಕರಣಗಳ ಜೋಡಿಯು ಅನೇಕ ಪರಿಹಾರಗಳನ್ನು ಹೊಂದಿದ್ದರೆ, 'b' ಯ ಬೆಲೆಯನ್ನು ಕಂಡುಹಿಡಿಯಿರಿ.

10) $P(x) = 5x^3 - 3x^2 + 12x - 8$ ಈ ಬಹುಪದೋಕ್ತಿಯ ಡಿಗ್ರಿ(ಮಹತ್ತಮ ಘಾತ) ಬರೆಯಿರಿ.

11) sin A $\frac{\sqrt{3}}{2}$ cos A =$\frac{1}{2}$ಆದರೆ, tan A ಬೆಲೆಯನ್ನು ಕಂಡುಹಿಡಿಯಿರಿ.

12) ಕೇಂದ್ರೀಯ ಪ್ರವೃತ್ತಿಯ ಅಳತೆಗಳಾದ ಸರಾಸರಿ, ಮಧ್ಯಾಂಕ ಮತ್ತು ಬಹುಲಕಗಳ ನಡುವಿನ ಪ್ರಾಯೋಗಿಕ ಸಂಬಂಧವನ್ನು ಬರೆಯಿರಿ.

13) $\frac{(x+1)}{2} = \frac{3}{x}$ ಈ ವರ್ಗಸಮೀಕರಣವನ್ನು ಆದರ್ಶರೂಪದಲ್ಲಿ ಬರೆಯಿರಿ.

ಉತ್ತರಕ್ಕಾಗಿ ನಿರೀಕ್ಷಿಸಿ

ಮಾರ್ಗದರ್ಶಿ ಶಿಕ್ಷಕರು : **ಎಂ.ಎಸ್.ಮಂಜುನಾಥ**, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

• Admissions
• Requirements
• Firm Branding
• Public Notice
• Change of Name


BOOK NOW!

Book Your Advertisements in Leading Local HAMPI TIMES Print & Digital News Paper

9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 07–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.95 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 8091 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 76.320 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1589.02 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.229 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

08–01–2025 – ಬುಧವಾರ

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅಶ್ವಿನಿ |
| ಯೋಗ | : ಸಿದ್ಧಿ |
| ಕರಣ | : ಕೌಳವ |
| ಸೂರ್ಯೋದಯ | : 07:11:10 |
| ಸೂರ್ಯಾಸ್ತ | : 17:56:24 |
| ರಾಹು ಕಾಲ | : 12:34–13:54 |
| ಯಮಘಂಡ ಕಾಲ | : 08:32–09:52 |
| ಗುಳಿಕ ಕಾಲ | : 11:13–12:34 |

# ನಕಲಿ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲು

## ವೈದ್ಯಕೀಯ ಪದವಿ ಇಲ್ಲದೇ ವೈದ್ಯವೃತ್ತಿ ಮಾಡುತ್ತಿದ್ದ 6 ಜನರಿಗೆ 1 ಲಕ್ಷ ರೂ. ದಂಡ, ಒಬ್ಬರ ವಿರುದ್ಧ ಎಫ್‌ಐಆರ್ : ಡಿಸಿ ಮಿಶ್ರಾ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ವೈದ್ಯಕೀಯ ಪದವಿ ವೃತ್ತಿ ಪಡೆಯದೇ ವೈದ್ಯಕೀಯ ಸೇವೆ ನೀಡುವ ನಕಲಿ ವೈದ್ಯರ ವಿರುದ್ಧ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ರಡಿ ದಂಡ ವಿಧಿಸುವ, ಅಗತ್ಯವೆನಿಸಿದಲ್ಲಿ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ ಕಾನೂನಾತ್ಮಕ ಕ್ರಮ ಜರುಗಿಸಬೇಕು ಎಂದು ಕೆಪಿಎಮ್‌ಇ ಕಾಯ್ದೆಯ ಅಧ್ಯಕ್ಷರು ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸೂಚಿಸಿದರು.

ಮಂಗಳವಾರದಂದು ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಏರ್ಪಡಿಸಿದ್ದ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ ಕೆಪಿಎಮ್‌ಇ ಕಾಯ್ದೆ ನೋಂದಣಿ ಮತ್ತು ಕುಂದು ಕೊರತೆಗಳ ಪರಿಹಾರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಯಾರಾದರು ಅಧೀಕೃತ ವೈದ್ಯಕೀಯ ಪದವಿ ಪಡೆಯದೇ ವೈದ್ಯ ವೃತ್ತಿ ಮಾಡುವವರ ಮನೆ, ಮಳಿಗೆ, ಇತರೆ ಯಾವುದೇ ರೀತಿಯ ಕಟ್ಟಡಗಳಿಗೆ ಆರೋಗ್ಯಾಧಿಕಾರಿಗಳು ಅನಿರೀಕ್ಷಿತ ದಾಳಿ ನಡೆಸಬೇಕು. ಅಂತಹವರಿಗೆ ಬಾಡಿಗೆ ಕಟ್ಟಡ ನೀಡಿದ್ದಲ್ಲಿ ಕಟ್ಟಡ ಮಾಲೀಕರ ವಿರುದ್ಧ ಕೆಪಿಎಮ್‌ಇ ಕಾಯ್ದೆಯಡಿ



ಕಾನೂನಾತ್ಮಕ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಸಾರ್ವಜನಿಕರು ಆರೋಗ್ಯದ ದೃಷ್ಟಿಯಿಂದ ಅಧಿಕೃತ ವೈದ್ಯಕೀಯ ಪದವಿ ಪಡೆದ ವೈದ್ಯರ ಬಳಿ ತಪಾಸಣೆ ಮಾಡಿಸಲು ಸೂಚಿಸಬೇಕು. ಇದರಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ಗಂಭೀರ ಪರಿಣಾಮಗಳನ್ನು ತಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಅನಧೀಕೃತವಾಗಿ ವೈದ್ಯ ವೃತ್ತಿ ಮಾಡುತ್ತಿರುವವರು ಕಂಡುಬಂದಲ್ಲಿ ಅವರ ವೈದ್ಯಕೀಯ ಪದವಿಯ ಮಾಹಿತಿ ಹೊಂದಿ ಚಿಕಿತ್ಸೆ ಪಡೆಯಬೇಕು. ನಕಲಿ ವೈದ್ಯರು ಎಂದು ಕಂಡುಬಂದರೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಅಥವಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯಕ್ಕೆ ದೂರು ನೀಡಿದರೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ರ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಬಳ್ಳಾರಿ ತಾಲ್ಲೂಕಿನ ಜಾಲಿಬೆಂಚಿ ಗ್ರಾಮದಲ್ಲಿ ವೈದ್ಯವೃತ್ತಿ ಮಾಡುತ್ತಿದ್ದ ನಕಲಿ ವೈದ್ಯ ಬಸವರಾಜ್ ವಿರುದ್ಧ ಮೋಕ ಪೋಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ (ಎಫ್‌ಐಆರ್) ದಾಖಲಿಸಲು ಸೂಚಿಸಿದ ಅವರು, ಕಪ್ಪಗಲ್ಲು ಗ್ರಾಮದ ರಾಜಣ್ಣ, ರೆಹಮಾನ್, ಶೇಕ್ಷಾವಲಿ, ಗುರು ಪ್ರಕಾಶ್, ಮಹಾದೇವ್ ಮತ್ತು ಸಿರುಗುಪ್ಪ ತಾಲ್ಲೂಕಿನ ಕೆ.ಸೂಗೂರು ಗ್ರಾಮದ ಬೆಂಚಿ ಕ್ಯಾಂಪ್‌ನ ಕೆ.ಚಂದ್ರಶೇಖರ್ ಸೇರಿದಂತೆ ಒಟ್ಟು 6 ಜನರ ವಿರುದ್ಧ ತಲಾ 1 ಲಕ್ಷ ದಂಡ ವಿಧಿಸಲು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು, ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಪೂರ್ಣಿಮಾ ಎಸ್ ಕಟ್ಟಿಮನಿ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್, ಐಎಮ್‌ಎ ಅಧ್ಯಕ್ಷ ಡಾ.ಮಾಣಿಕ್‌ರಾವ್ ಕುಲಕರ್ಣಿ, ಫಾಕ್ಸಿ ಅಧ್ಯಕ್ಷ ಡಾ.ಶಿವಕುಮಾರ್, ಎಫ್‌ಪಿಎಐ ನ ವ್ಯವಸ್ಥಾಪಕರಾದ ವಿಜಯಲಕ್ಷ್ಮಿ, ಆರೋಗ್ಯ ನಿರೀಕ್ಷಣಾಧಿಕಾರಿ ಅರುಣ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಹದಗೆಟ್ಟ ರಸ್ತೆಗೆ ಡಾಂಬರೀಕರಣಕ್ಕೆ ಚಾಲನೆ

## ಅಂದಾಜು 3 ಕೋಟಿ ರೂ ಅಧಿಕ ಕೆಕೆಆರ್‌ಡಿಬಿ ಅನುದಾನ । ಶಾಸಕ ಡಾ.ಎನ್.ಟಿ.ಶ್ರೀನಿವಾಸ ಹೇಳಿಕೆ



■ ಹಂಪಿ ಟೈಮ್ಸ್ ಕೂಡ್ಲಿಗಿ

ಸುಂದರ ಹಾಗೂ ಸ್ವಚ್ಛ ಪಟ್ಟಣಕ್ಕೆ ಮೊದಲ ಆದ್ಯತೆ ನೀಡುವುದಾಗಿ ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು.

ಪಟ್ಟಣದ ರಾಮ ಲಿಂಗೇಶ್ವರ ದೇವಸ್ಥಾನದ ಬಳಿ ಹೊಸಪೇಟೆ ರಸ್ತೆಗೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಸುಮಾರು ವರ್ಷಗಳಿಂದಲೂ ಮದಕರಿ ವೃತ್ತದಿಂದ ಹೊಸಪೇಟೆ ರಸ್ತೆ ಮಾರ್ಗ ತೀರ ಹದಗೆಟ್ಟಿತು ಈ ಬಗ್ಗೆ ಸಾರ್ವಜನಿಕರು ಅನೇಕ ದೂರುಗಳನ್ನು ಸಹ ನೀಡಿದ್ದರು. ಆದ್ದರಿಂದ ಕೆಕೆಆರ್‌ಡಿಬಿ ಅನುದಾನದಲ್ಲಿ ಅಂದಾಜು 3 ಕೋಟಿಗೂ ಅಧಿಕ ಹಣದಲ್ಲಿ ಡಾಂಬರೀಕರಣ ಮಾಡಲು ಹಣ ನೀಡಿಲಾಗಿದೆ ಎಂದರು. ಈಗಾಗಲೇ ಪಟ್ಟಣದ ಆರಾಧ್ಯ ದೇವಿ ಗುಳೇ ಲಕ್ಕಮ್ಮ ದೇವಸ್ಥಾನಕ್ಕೆ ಭಕ್ತರು ತೆರಳಲು ಸೂಕ್ತ ರಸ್ತೆ ಸಂಪರ್ಕ ಇದ್ದಿಲ್ಲ, ಇದನ್ನು ಮನಗಂಡು 5 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಹಣ ನೀಡಿ ಕಾಮಗಾರಿಯೂ ಸಹ ಪ್ರಗತಿಯಲ್ಲಿದೆ ಅದರಂತೆ ಪಟ್ಟಣದ ಪ್ರಮುಖ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೆ ಮುಂದಾಗು ವುದಾಗಿ ತಿಳಿಸಿದರು. ಪಟ್ಟಣದ ಹೃದಯ ಭಾಗದಲ್ಲಿನ ಉಡುಸಲಮ್ಮನ ಕರೆ ಇದ್ದು, ಪಟ್ಟಣದಲ್ಲಿನ ಸಾರ್ವಜನಿಕರು ಬೆಳಿಗ್ಗೆ ಹಾಗೂ ಸಂಜೆ ವಾಯು ವಿಹಾರಕ್ಕೆ ಅನುಕೂಲ ಇರುವ ಈ ಕೆರೆಯನ್ನು ಅತ್ಯಂತ ಸುಂದರ ಹಾಗೂ ಕುಳಿತು ವಿಶ್ರಾಂತಿ ಪಡೆಯಲು ಆಸನಗಳು ಸೇರಿದಂತೆ ವಿದ್ಯುತ್ ಅಲಂಕಾರ ಮಾಡುವ ಯೋಜನೆಯನ್ನು ರೂಪಿಸಿದ್ದು ಮುಂಬರುವ ದಿನಗಳಲ್ಲಿ ಉಡುಸಲಮ್ಮನ ಕೆರೆಯನ್ನು ಸಾರ್ವಜನಿಕರಿಗೆ ಒಳ್ಳೆಯ ಉದ್ಯಾನ ವನ ಸೇರಿದಂತೆ ವಾಯು ವಿಹಾರ ಮಾಡಲು ಅನುಕೂಲ ಕಲ್ಪಿಸಲಾಗುವುದು ಎಂದು ತಿಳಿಸಿದರು. ಇನ್ನೂ ಪಟ್ಟಣದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದ್ದು ಪಪಂ ಸದಸ್ಯರ ಹಾಗೂ ಸಾರ್ವಜನಿಕರ ಅಭಿಪ್ರಾಯ ಪಡೆದು ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹಗಲಿರುಳು ಶ್ರಮಿಸುವೆ ಎಂದು ತಿಳಿಸಿದರು.

ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಸ್ಥಾಯಿ ಸಮಿತಿ ಅಧ್ಯಕ್ಷ ಸಯ್ಯದ್ ಶುಕೂರ್, ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಸದಸ್ಯರಾದ ತಳಾಸ್ ವೆಂಕಟೇಶ, ಕೆ.ಈಶಪ್ಪ, ಪೂರ್ಯಾ ನಾಯ್ಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಗುರುಸಿದ್ದನ ಗೌಡ, ಮಾಜಿ ಜಿಪಂ ಸದಸ್ಯ ನರಸಿಂಹಗಿರಿ ವೆಂಕಟೇಶ, ನಾಗಮಣಿ ಜಿಂಕಾಲ್, ಪ್ರಭಾಕರ, ಧಾಣಿ ರಾಘವೇಂದ್ರ, ಟೋಪಿ ಸುರೇಶ್, ಸಣ್ಣ ಕೊತ್ತಪ್ಪ, ಬಿ.ಕೆ.ರಾಘವೇಂದ್ರ, ಕಡ್ಡಿ ಮಂಜುನಾಥ, ಹಡಗಲಿ ವೀರಭದ್ರಪ್ಪ, ಉದಯ ಜನ್ನು, ಜಿಲಾನ್, ಡಿ.ಎಚ್.ದುರುಗೇಶ್ ಸೇರಿದಂತೆ ಇತರರಿದ್ದರು.

# ಫಲಿತಾಂಶ ಪ್ರಗತಿಗೆ ಮಕ್ಕಳೊಂದಿಗೆ ಸಂವಾದ ಮಕ್ಕಳೊಂದಿಗೆ ಬಿಸಿಯೂಟ ಸವಿದ ಬಿಇಒ



■ ಹಂಪಿ ಟೈಮ್ಸ್ ಕಂಪ್ಲಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಸುಧಾರಣೆ ಹಿನ್ನಲೆಯಲ್ಲಿ ಕುರುಗೋಡು ಬಿಇಒ ಮಂಗಳವಾರ ತಾಲೂಕಿನ ದೇವಲಾಪುರ, ಮೆಟ್ರಿ, ದೇವಸಮುದ್ರ, ಕಂಪ್ಲಿ ಸರ್ಕಾರಿ ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದಿಸಿದರು. ಮಕ್ಕಳೊಂದಿಗೆ ಬೆರೆತು ಬಿಸಿಯೂಟ ಸವಿದರು.

ಬಿಇಒ ಟಿ.ಎಂ.ಸಿದ್ಧಲಿಂಗಮೂರ್ತಿ ಮಾತನಾಡಿ, ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ 20ಅಂಶಗಳ ಕಾರ್ಯಕ್ರಮವನ್ನು ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿದೆ. ಪ್ರತಿ ಶಾಲೆಯಲ್ಲೂ ಶೇ.100ರಷ್ಟು ಫಲಿತಾಂಶ ಸಾಧಿಸುವ ಗುರಿ ನೀಡಿದೆ ಎಂದರು.

ಮಕ್ಕಳೊಂದಿಗೆ ಸಂವಾದಿಸಿ ಪರೀಕ್ಷೆಯಲ್ಲಿ ಕನಿಷ್ಟ ಮತ್ತು ಗರಿಷ್ಟ ಅಂಕಗಳಿಸುವ ಕೌಶಲ, ಪರೀಕ್ಷೆಗೆ ಸಿದ್ಧತೆ, ಪಠ್ಯ ಓದುವ ಕ್ರಮ, ಪಾಸಿಂಗ್ ಪ್ಯಾಕೇಜ್ ಓದುವ ಸೇರಿ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾಗಲು ಅಗತ್ಯ ಅಂಶಗಳ ಬಗ್ಗೆ ತಿಳಿಸಿ ಪ್ರೇರೇಪಿಸಿದರು. ಬಿಸಿಯೂಟದಲ್ಲಿ ಮೊಟ್ಟೆ, ಬಾಳೆಹಣ್ಣು, ಚಿಕ್ಕಿ ಸೇವಿಸುವಂತೆ ತಿಳಿಸಿದರು. ದೇವಲಾಪುರ ಸರ್ಕಾರಿ ಪ್ರೌಢಶಾಲೆ ಮಕ್ಕಳೊಂದಿಗೆ ಬಿಸಿಯೂಟ ಸವಿದು ಗುಣಮಟ್ಟ ಪರಿಶೀಲಿಸಿದರು. ಬಿಸಿಯೂಟ ತಯಾರಕರಿಗೆ ಅಗತ್ಯ ಕ್ರಮಗಳು ಕುರಿತು ತಿಳಿಸಿದರು. ಇದೇ ಸಂದರ್ಭದಲ್ಲಿ ಅತಿಥಿ ಶಿಕ್ಷಕರು ಎರಡು ತಿಂಗಳ ವೇತನ ಬಾಕಿ ಇರುವ ಕುರಿತು ಬಿಇಒ ಗಮನಕ್ಕೆ ತಂದಾಗ ಎರಡು ದಿನಗಳಲ್ಲೇ ವೇತನ ವಿತರಿಸುವ ಭರವಸೆ ನೀಡಿದರು.

ಸಿಆರ್‌ಪಿ ವೀರೇಶ್, ನಿರ್ಮಲಾ, ಎಚ್.ಪಿ.ಸೋಮಶೇಖರ, ಚಂದ್ರಪ್ಪ ಕಂಬಳಿ, ಶ್ಯಾಮಲಾ, ಬ್ರಹ್ಮಾನಂದ, ಎಚ್.ಶಕುಂತಲಾ, ಅತಿಥಿ ಶಿಕ್ಷಕರಾದ ವಿರುಪಾಕ್ಷಿ, ಉಮೇಶ್ ಸೇರಿ ಮುಖ್ಯಶಿಕ್ಷಕರು, ಶಿಕ್ಷಕರು ಇದ್ದರು.

# ತೊಗರಿ ಖರೀದಿ ಪ್ರಾರಂಭ

ಮೂರನೆ ಪುಟದಿಂದ

ತಾಲ್ಲೂಕಿನ ನವಲಿ, ಕನಕಗಿರಿ, ಕುಷ್ಟಗಿ ತಾಲ್ಲೂಕಿನ ಹನುಮಸಾಗರ, ತಾವರಗೇರಾ, ಕುಷ್ಟಗಿ, ಹಿರೇನಂದಿಹಾಳ, ಹಾಗೂ ಕುಕನೂರು ನಲ್ಲಿ ತೊಗರಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ.

ನೋಡಲ್ ಅಧಿಕಾರಿಗಳ ವಿವರ: ತೊಗರಿ ಖರೀದಿ ಕೇಂದ್ರಗಳಾದ ಹಿರೇಸಿಂಧೋಗಿ ಖರೀದಿ ಕೇಂದ್ರಕ್ಕೆ ಕೊಪ್ಪಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ವಿ.ಬಸವರಾಜ ಮೊ.ಸಂ: 9448765143, ನವಲಿ ಹಾಗೂ ಕನಕಗಿರಿ ಖರೀದಿ ಕೇಂದ್ರಕ್ಕೆ ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಹರೀಶ ಪತ್ತಾರ ಮೋ.ಸಂ: 9060893320, ಕುಷ್ಟಗಿ, ಹನುಮಸಾಗರ, ತಾವರಗೇರಾ, ಹಿರೇನಂದಿಹಾಳ ಖರೀದಿ ಕೇಂದ್ರಕ್ಕೆ ಕುಷ್ಟಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಸುರೇಶ ಬಿ ತಂಗನೂರು ಮೋ.ಸಂ: 9880886909, ಕುಕನೂರು ಖರೀದಿ ಕೇಂದ್ರಕ್ಕೆ ಯಲಬುರ್ಗಾ (ಕೇಂದ್ರ ಕಚೇರಿ, ಕುಕನೂರು) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಗುರುಪ್ರಸಾದ್ ಗುಡಿ ಮೊ.ಸಂ: 9972054874, ಇವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಪ್ರತಿ ಎಕರೆಗೆ ಗರಿಷ್ಠ 04 ಕ್ವಿಂಟಲ್‌ರಂತೆ ಪ್ರತಿ ರೈತರಿಂದ ಗರಿಷ್ಠ 40 ಕ್ವಿಂಟಲ್ ತೊಗರಿ ಉತ್ಪನ್ನವನ್ನು ಖರೀದಿಸಲಾಗುತ್ತದೆ. ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಮಾತ್ರ ಖರೀದಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಕೊಪ್ಪಳ ದೂ.ಸಂ: 08539–230040, ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ನೀರಾವರಿ ಕಾಮಗಾರಿ ವಿಳಂಬವಾದ್ರೆ ಸಹಿಸಲ್ಲ

## ಸಚಿವ ಶಿವರಾಜ ಎಸ್. ತಂಗಡಗಿ ಸೂಚನೆ । ನೀರಾವರಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲೆಯಲ್ಲಿ ನಡೆಯುತ್ತಿರುವ ನೀರಾವರಿ ಯೋಜನೆಯನ್ನು ಕಾಲಮಿತಿಯಲ್ಲಿ ಮುಗಿಸಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಕರೆದ ಕೊಪ್ಪಳ ಜಿಲ್ಲೆಯ ವಿವಿಧ ನೀರಾವರಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕಾಲಮಿತಿಯಲ್ಲಿ ನೀರಾವರಿ ಯೋಜನೆಗಳು ಆಗದಿದ್ದರೆ ರೈತರಿಗೆ ನೀರು ಕೊಡಲು ಹೇಗೆ ಸಾಧ್ಯ ಕೆಲವೊಂದು ಯೋಜನೆಗಳು ಸುಮಾರು ವರ್ಷಗಳಿಂದ ಹಾಗೆ ನಡೆಯುತ್ತಲೆ ಇವೆ. ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಿದಾಗ ಅವುಗಳು ಕಾಲಮಿತಿಯಲ್ಲಿ ಮುಗಿಯುತ್ತವೆ. ಅಳವಂಡಿ ಬೆಟಗೇರಿ ಏತ ನೀರಾವರಿ ಯೋಜನೆಯ ಜನವರಿ 30ರ ಒಳಗಡೆ ಮುಗಿಯಬೇಕು. ಸಿಂಗಟಾಲೂರು ಏತ ನೀರಾವರಿ ಯೋಜನೆ ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಯಾವ ಹಂತದಲ್ಲಿದೆ ಎಂದು ಸಚಿವರು ನೀರಾವರಿ ಇಲಾಖೆಯ ಅಧಿಕಾರಿ



ಗಳಿಂದ ಮಾಹಿತಿ ಪಡೆದು, ಈ ಯೋಜನೆಯ ಕಾಮಗಾರಿಯನ್ನು ವಿಳಂಭ ಮಾಡದೇ ಪೂರ್ಣಗೊಳಿಸಬೇಕೆಂದರು.

ಮತ್ತೆ ಸಭೆ ಕರೆಯುತ್ತೆನೆ ಆಗ ಗುತ್ತಿಗೆದಾರರಿಗೂ ಸಭೆಗೆ ಕರೆಯಬೇಕು. ಕಾಲಮಿತಿಯಲ್ಲಿ ಕೆಲಸ ಮುಗಿಸದ ಗುತ್ತಿಗೆದಾರರಿಗೆ ನೋಟೀಸ್ ನೀಡಿ ಬ್ಲ್ಯಾಕ್ ಲಿಸ್ಟಗೆ ಸೇರಿಸಬೇಕು. ಕೆರೆಗಳ ವೀಕ್ಷಣೆಗೂ ಬರುತ್ತೆನೆ. ಕಾಟಾಪುರ. ಶಿರವಾರ. ಕರಡೋಣ ಕೆರೆಗಳಿಗೆ ನೀರು ಬಿಡಬೇಕು. ಈಗ ಕೆರೆಗಳು ತುಂಬಿದರೆ ಬೇಸಿಗೆಯಲ್ಲಿ ನೀರಿನ ಸಮಸ್ಯೆಗಳಾಗುವುದಿಲ್ಲ. ಸಭೆಯಲ್ಲಿ ಚರ್ಚೆಯಾದ ಎಲ್ಲಾ ವಿಷಯಗಳನ್ನು ಅಧಿಕಾರಿಗಳು ಪಾಲನೆ ಮಾಡಬೇಕು ಎಂದು ಹೇಳಿದರು.

ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಮಾತನಾಡಿ ನೀರಾವರಿ ಯೋಜನೆಯ ಯಾವುದೇ ಕೆಲಸ ಮತ್ತು ಕಾಮಗಾರಿಗಳ ಕುರಿತು ಮೂರು ತಿಂಗಳಿಗೊಮ್ಮೆ ಆದರು ಸಭೆ ನಡೆಯಬೇಕು. 18 ತಿಂಗಳಲ್ಲಿ ಮುಗಿಯುವ ಕೆಲಸಗಳು ಹಲವಾರು ವರ್ಷಗಳು ತೆಗೆದುಕೊಳ್ಳುತ್ತವೆ. ಆಗಾಗ ನೀರಾವರಿ ಯೋಜನೆಗಳ ಸಭೆ ನಡೆಸಿದರೆ ಅವುಗಳ ಸಮಸ್ಯೆಗಳನ್ನು ಬಗೆಹರಿಸಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಈ ಸಭೆಯಲ್ಲಿ ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ. ಜಿಲ್ಲಾಧಿಕಾರಿ ನಲಿನ್ ಅತುಲ್. ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ. ಸಹಾಯಕ ಆಯುಕ್ತರಾದ ಮಹೇಶ್ ಮಾಲಗಿತ್ತಿ ಸೇರಿದಂತೆ ಕೃಷ್ಣ ಭಾಗ್ಯ ಜಲ ನಿಗಮ. ಕರ್ನಾಟಕ ನೀರಾವರಿ ನಿಗಮ ನಿಯಮಿತ. ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜ.10 ವಾಕ್ ಇನ್ ಇಂಟರ್‌ವ್ಯೂವ್

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ವಾಕ್ ಇನ್ ಇಂಟರ್‌ವ್ಯೂವ್ ಅನ್ನು ಜನವರಿ 10ರಂದು ಅಂದು ಬೆಳಿಗ್ಗೆ 10:30 ರಿಂದ 1.30 ಗಂಟೆಯವರೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಈ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಖಾಸಗಿ ಸಂಸ್ಥೆಗಳು ಭಾಗವಹಿಸಲಿದ್ದು, ತಮ್ಮಲ್ಲಿರುವ ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ. 18 ರಿಂದ 30 ವರ್ಷ ವಯೋಮಾನದ ಪಿಯುಸಿ, ಯಾವುದೇ ಪದವಿ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಅರ್ಹ ವಿದ್ಯಾರ್ಹತೆ ಹೊಂದಿದ ಯುವಕ ನಿರುದ್ಯೋಗಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸಿ ಉದ್ಯೋಗದ ನೆರವು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ, ದೂ.ಸಂ: 08539–220859 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us